(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಕರ್ನಾಟಕದ ಬಗ್ಗೆ ಮಾತನಾಡುತ್ತಿದ್ದೇವೆ.

ಅಧ್ಯಕ್ಷರು :- ನೀವು ಮಾತನಾಡಿ. ಬೇಡವೆನ್ನುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಕರ್ನಾಟಕದ ಬಗ್ಗೆ ನಾವು ಮಾತನಾಡುವುದು. ಈ ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರಸರ್ಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೋಗಿ ಸಂಪರ್ಕ ಮಾಡಿ ಎನ್ನುವುದು ನಮ್ಮ ಒತ್ತಾಯ. ಕರ್ನಾಟಕದ ಬೆಳಗಾವಿಯಲ್ಲಿ ನಾವು ವಿಧಾನಸಭೆ ನಡೆಸುವುದು ನ್ಯಾಯ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಲಿ ಎಂದು ಕೇಳುತ್ತಿದ್ದೇನೆ.

ಸಭಾಧ್ಯಕ್ಷರು :- ಜಯಚಂದ್ರರವರೇ ಮಾತನಾಡಿ.

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ :- ರಾಜ್ಯದಲ್ಲಿ ಕಾನೂನು ಬಾಹಿರವಾಗಿ ನಡೆದಿರುವ ಗಣಿಗಾರಿಕೆ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ಕೋರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಬಹುಶ: ಆ ನಿಲುವಳಿ ಸೂಚನೆ ಬಹಳ ಪ್ರಾಮುಖ್ಯವಾಗಿರುವಂಥ ವಿಚಾರ. ಅದು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳವಾದ ನಿರ್ದಿಷ್ಟವಾಗಿರುವಂಥ ವಿಚಾರ. ನಾವು ಆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಅನಿವಾರ್ಯತೆ ಇವತ್ತು ಇದೆ. ವಿಧಾನಸಭೆ ಪ್ರಾರಂಭವಾದ ದಿನಗಳಲ್ಲಿ ಅದರ ಅವಶ್ಯಕತೆ ಏನು ಎನ್ನುವುದಕ್ಕೆ ಬೆಳಿಗ್ಗೆ ಪತ್ರಿಕೆಯಲ್ಲಿ, ಟಿ.ವಿ. ಮಾಧ್ಯಮದಲ್ಲಿ ನೋಡಿದರೆ ಗೊತ್ತಾಗುತ್ತದೆ. ರೇಷನ್ ಕಾರ್ಡ್‌ಗಳಿಗೋಸ್ಕರ ಜನ ಮುಗಿಲು ಬಿದ್ದು ಬ್ಯಾಂಕುಗಳ ಮುಂದೆ, ನೆಮ್ಮದಿಯ ಕೇಂದ್ರಗಳ ಮುಂದೆ, ತಾಲ್ಲೂಕು ಆಫೀಸ್‌ಗಳ ಮುಂದೆ ಇಡೀ ತಾಲ್ಲೂಕಿನ ಜನ ಹೋಗಿ ನಿಂತಿರತಕ್ಕಂಥ ದೃಶ್ಯ ಒಂದು ಕಡೆಯಾದರೆ, ಇನ್ನೊಂದು ಕಡೆ ಕರ್ನಾಟಕದ ಒಂದು ಭಾಗವಾಗಿರುವ ಬಳ್ಳಾರಿ ಜಿಲ್ಲೆಯಲ್ಲಿ ಏನನ್ನು ನಾವು ನೋಡಬಹುದು ಎಂದು ಹೇಳಿದರೆ ನಿರಂತರವಾಗಿ ಹೆಲಿಕ್ಯಾಪ್ಟರ್‌ಗಳು ಹಾರಾಡುತ್ತಿರುವ ದೃಶ್ಯವನ್ನು ನಾವು ನೋಡಬಹುದು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಒಂದು ನಿಲುವಳಿ ಸೂಚನೆ ಇದೆ. ಅದು ಇರುವಾಗ ರೇಷನ್ ಕಾರ್ಡ್, ನೆಮ್ಮದಿ ಕೇಂದ್ರಗಳ ವಿಚಾರ ಏಕೆ ಪ್ರಸ್ತಾಪ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಸುರೇಶ್‌ಕುಮಾರ್‌ರವರೇ, ಅವರು ಗಣಿಗೆ ಬಿ.ಪಿ.ಎಲ್.ಕಾರ್ಡ್‌ನ ಪೀಠಿಕೆ ಹಾಕುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಪೀಠಿಕೆ, ಮುನ್ನುಡಿಯಾದರೆ ಆಗಬಹುದು.

ಶ್ರೀ ಟಿ.ಬಿ. ಜಯಚಂದ್ರ :- ಸಭಾಧ್ಯಕ್ಷರು ಪ್ರಿಲಿಮನರಿ ಸಬ್‌ಮಿಷನ್ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಾರೆಂದು ನಾನು ತಿಳಿದಿದ್ದೇನೆ. ಈಗ ತಾವು ನಿಲುವಳಿ ಸೂಚನೆಗೆ ಒಪ್ಪಿಗೆ ಕೊಟ್ಟಿದ್ದೇನೆಂದರೆ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಗಣಿಗಾರಿಕೆಗೆ ಯಾವಾಗಿನಿಂದ ರೇಷನ್ ಕಾರ್ಡ್ ಬಂತು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಸ್ವಲ್ಪ ಕೇಳಿ. ಆತುರಪಡಬೇಡಿ. ಗಣಿಗಾರಿಕೆ ಎನ್ನುವುದು ಕೇವಲ ಬಳ್ಳಾರಿ ಜಿಲ್ಲೆಗೆ ಸೀಮಿತವಾಗಿಲ್ಲ. ಚಿತ್ರದುರ್ಗ, ತುಮಕೂರು ಜಿಲ್ಲೆಗೂ ಸೀಮಿತವಾಗಿರುವಂಥದ್ದು, ತಾವೇ

ಜಿಲಾ ಮಂತ್ರಿಗಳು ಕೂಡ. ಕೇವಲ ಮೂರು, ನಾಲ್ಕು ವರ್ಷಗಳ ಹಿಂದೆ ರೇಷನ್ ಕಾರ್ಡ್ ಸಿಗದೇ ಇರಲಿಕ್ಕೆ ಸಾಧ್ಯವಿಲ್ಲದೇ ಇರುವಂಥ ಜನ ಇವತ್ತು ಬೆಂಜ್ ಕಾರ್‌ನಲ್ಲಿ ಓಡಾಡುತ್ತಾರೆ, ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತಾರೆ. ಏಕೆ ಇದು? ಏನು ಬದಲಾವಣೆ ಆಗಿದೆ, ಏನು ವ್ಯತ್ಯಾಸವಾಗಿದೆ ಎಂಬುದರ ಬಗ್ಗೆ ಚಿಂತನೆ ಮಾಡಬಹುದೇ? ಒಂದು ಕಡೆ ಅನ್ನಕೋಸ್ಕರ ಹಾಹಾಕಾರ. ಇನ್ನೊಂದು ಕಡೆಗೆ Concentration of wealth ಆಗಿರುವಂಥದ್ದು. ಇವತ್ತು ಅಕ್ರಮವಾಗಿ ಹಣ ಸೇರಿರುವುದನ್ನು ನಾವು ನೋಡುತ್ತಿದ್ದೇವೆ. ಏಕೆ ಇದು? ಈ ವ್ಯತ್ಯಾಸವೇಕೆ? ನಾವು ಎಲ್ಲೋ ಒಂದು ಕಡೆ ಸಂವಿಧಾನದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂದು ಎನ್ನುವುದಕ್ಕೆ ಇದಕ್ಕಿಂತ ಒಂದು ಸಾಕ್ಷಿ ಬೇಕಾಗಿಲ್ಲಯೆನ್ನುವ ಮಾತನ್ನು ನಾನು ಸಭಾನಾಯಕರಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ವಿಶೇಷವಾಗಿ ಎಲ್ಲರ ಗಮನ

ಇರುವುದು ಕರ್ನಾಟಕ ಮತ್ತು ಬಳ್ಳಾರಿ ಕಡೆಗೆ. ಇವತ್ತು ಎಲ್ಲದಕ್ಕಿಂಥ ಹೆಚ್ಚಾಗಿ ಲೋಕಾಯುಕ್ತರಿಂದ ಒಂದು ವರದಿ ಬಂದಿದೆ. ಆ ವರದಿ ಬಂದ ಮೇಲೆ ಇದೇ ಮೊದಲ ಬಾರಿಗೆ ಸಭೆ ನಡೆಯುತ್ತಿದೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಮಾನ್ಯ ಅಧ್ಯಕ್ಷರೇ, ಅಕ್ರಮ ಪ್ರಾರಂಭವಾದುದು ಯಾವಾಗಿನಿಂದ ಎಂಬುದನ್ನು ಹೇಳಿಬಿಡಿ. ಅದು ನಿಮ್ಮಿಂದ ಪ್ರಾರಂಭವಾಗಿದೆ. ಭೂಮಾಫಿಯ, ಅಕ್ರಮ ಗಣಿಗಾರಿಕೆ ಎಲ್ಲ ನಿಮ್ಮಿಂದ ಪ್ರಾರಂಭವಾಗಿದೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಪಕ್ಷದ ಹಲವು ಮಾನ್ಯ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಶ್ರೀ ಟಿ.ಬಿ. ಜಯಚಂದ್ರ :- ಲೋಕಾಯುಕ್ತ ವರದಿಯಲ್ಲಿರುವ ಸಾರಾಂಶವೇನು ಎಂಬುದು ಈಗ ಎಲ್ಲರಿಗೂ ಕೂಡ ಗೊತ್ತಿರುವಂಥದ್ದು. ಇದರಲ್ಲಿ ಯಾರ ಹೆಸರು ಪ್ರಸ್ತಾಪವಾಗಿದೆ ಎಂಬುದು ನನಗೆ ಗೊತ್ತಿದ್ದೇ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು. ಕಟ್ಟಾ ಸುಬ್ರಮಣ್ಯನಾಯ್ಡುರವರೇ, ಕರುಣಾಕರ ರೆಡ್ಡಿಯವರೇ, ರುದ್ರೇಶ್‌ಗೌಡರೇ, ಅವರು ಪ್ರಸ್ತಾಪ ಮಾಡಲಿ, ನಿಲುವಳಿ ಸೂಚನೆಯನ್ನು ಅವರು ಕೊಟ್ಟಿದ್ದಾರೆ. ಅವರು ಪ್ರಸ್ತಾಪ ಮಾಡಲಿ. ದಯವಿಟ್ಟು ಕುಳಿತುಕೊಳ್ಳಿ. ಕೃಷ್ಣಪ್ಪನವರೇ, ರುದ್ರೇಶ್‌ಗೌಡರೇ ದಯವಿಟ್ಟು ಕುಳಿತುಕೊಳ್ಳಿ, ಪ್ಲೀಸ್.

ಶ್ರೀ ಬಸವರಾಜ ಬೊಮ್ಮಾಯಿ :- ಜಯಚಂದ್ರರವರು ಬಿ.ಪಿ.ಎಲ್. ಕಾರ್ಡ್ ಬಗ್ಗೆ ಏನು ಪ್ರಸ್ತಾಪ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಬಸವರಾಜ ಬೊಮ್ಮಾಯಿಯವರೇ ನೀವು ತಪ್ಪು ತಿಳಿದುಕೊಂಡಿದ್ದೀರಿ. ಬಿ.ಪಿ.ಎಲ್ ಕಾರ್ಡ್ ಬಗ್ಗೆ ನಿಲುವಳಿ ಸೂಚನೆಯಲ್ಲ, ಗಣಿ ಬಗ್ಗೆ. ಅವರು ಪೀಠಿಕೆಯಲ್ಲಿ ಆ ರೀತಿ ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಹೇಳಿದ್ದು ಕೇವಲ ಬಳ್ಳಾರಿ ಅಷ್ಟೇ. ಅದೆಲ್ಲ ಕೂಡ ಇವತ್ತು ಲೋಕಾಯುಕ್ತ ವರದಿಯಲ್ಲಿ ವಿಚಾರ ಪ್ರಸ್ತಾಪವಾಗಿದೆ. ಈ ಗಣಿ ವಿಚಾರ ಯಾರಿಂದ ಪ್ರಾರಂಭವಾಗಿದೆ ಎಂಬ ಪ್ರಶ್ನೆ ಅಲ್ಲ. ಈ ರಾಜ್ಯದ ಹಿತದೃಷ್ಟಿಯಿಂದ ನಾನು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು. ಕಟ್ಟಾ ಸುಬ್ರಮಣ್ಯ ನಾಯ್ಡುರವರೇ ದಯವಿಟ್ಟು ಕುಳಿತುಕೊಳ್ಳಿ. ಈಗ ಮಾನ್ಯ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ನೀವು ಈ ರೀತಿ ಅಡೆತಡೆ ಮಾಡುವುದು ಸರಿಯಲ್ಲ. ಅವರೇನು ಪ್ರಸ್ತಾಪ ಮಾಡುತ್ತಾರೆ ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾರೆ. ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಪ್ರಿಲಿಮನರಿ ಸಬ್‌ಮಿಷನ್ ಮಾಡಲಿ, ಸರ್ಕಾರದವರು ಆ ಬಗ್ಗೆ ಉತ್ತರ ಕೊಡಲಿ. ಅದನ್ನು ಯಾವರೀತಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಈ ರೀತಿ ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬ ಸದಸ್ಯರು ಅಡೆತಡೆ ಮಾಡುವುದು ಸರಿಯಲ್ಲ. ಇದು ಸದನದ ಗೌರವಕ್ಕೆ ಸರಿಯಾದುದಲ್ಲ. ನಿಲುವಳಿ ಸೂಚನೆ ಕೊಟ್ಟಿರುವವರಿಗೆ ಇವತ್ತು ಅವಕಾಶ ಕೊಡಬೇಕಲ್ಲವೇ? ದಯವಿಟ್ಟು ಸಹಕಾರ ಕೊಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- 2001 ರಿಂದ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿ ಆದಾಗಿನಿಂದಲೂ ಕೂಡ ಇಲ್ಲಿಯವರೆಗೆ ಕೂಡ ಸಂಕ್ಷಿಪ್ತವಾಗಿರುವಂಥ ಮಾಹಿತಿ ಇದೆ.

(ಗೊಂದಲ)

ಅಧ್ಯಕ್ಷರು :- ಶ್ರೀ ಸೋಮಶೇಖರ್ ರೆಡ್ಡಿಯವರೇ, ಶ್ರೀ ಅಶೋಕ್‌ರವರೇ, ಶ್ರೀ ಕರುಣಾಕರ ರೆಡ್ಡಿಯವರೇ, ರಾಜುರವರೇ, ರುದ್ರೇಶ್‌ಗೌಡರೆ ದಯಮಾಡಿ ಕುಳಿತುಕೊಳ್ಳಿ. ಅಶೋಕ್‌ರವರೇ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ :- ಈ ನಿಲುವಳಿ ಸೂಚನೆಯನ್ನು ಅವರು ಸರ್ಕಾರದ ವಿರುದ್ಧವಾಗಿ ತರುತ್ತಿದ್ದಾರೆಯೇ ಅಥವಾ ಅವರ ಪಕ್ಷದ ಮೇಲೆ ತರುತ್ತಿದ್ದಾರೆಯೇ? ಅದರ ಬಗ್ಗೆ ಅವರು ಹೇಳಲಿ.

ಅಧ್ಯಕ್ಷರು :- ಅದರ ಬಗ್ಗೆ ಅವರು ಹೇಳುತ್ತಾರೆ. ನೀವು ಕುಳಿತುಕೊಳ್ಳಿ. ಉತ್ತರ ಕೊಡುವಾಗ ಮಾತನಾಡಿ. ಈ ರೀತಿ ವಾದ ಮಾಡಿದರೆ ಹೇಗೆ?

ಶ್ರೀ ಆರ್. ಅಶೋಕ್ :- ಸರ್ಕಾರದ ಪಾತ್ರ ಏನಿದೆ ಇದರಲ್ಲಿ? ನಾವು ಏಳು ತಿಂಗಳು ಸರ್ಕಾರವನ್ನು ನಡೆಸಿದ್ದೇವೆ. ನಿಲುವಳಿ ಸೂಚನೆ ಕೊಟ್ಟಿರುವವರು ಕಾಂಗ್ರೆಸ್ ಮತ್ತು ಜನತಾದಳದವರು. ನೀವು ನಿಲುವಳಿ ಸೂಚನೆಯನ್ನು ಸರ್ಕಾರದ ವಿರುದ್ಧವಾಗಿ ಕೊಡುತ್ತಿರುವಿರಾ? ಅಥವಾ ನಿಮ್ಮ ಪಕ್ಷದ ಮೇಲೆ ಕೊಡುತ್ತಿರುವಿರಾ, ಮೊದಲು ಅದನ್ನು ಹೇಳಿ. ಈ ಸರ್ಕಾರದ ಪಾತ್ರ ಏನಿದೆ ಇದರಲ್ಲಿ ಅದರ ಬಗ್ಗೆ ತಿಳಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಅದೇನೇ ಇರಲಿ.

ಅಧ್ಯಕ್ಷರು :- ನೋಡಿ. ನಾನು ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ ಒಬ್ಬ ಗೌರವಾನ್ವಿತ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ತಂದಾಗ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ, ಬೇಡವೇ ಎನ್ನುವಂಥಾದ್ದು. ಆ ನಿಲುವಳಿ ಸೂಚನೆಯಲ್ಲಿ ಬರುತ್ತದೋ ಇಲ್ಲವೋ ಎನ್ನುವಂಥಾದ್ದು ಅವರು ಪ್ರಿಲಿಮನರಿ ಸಬ್‌ಮಿಷನ್ ಮಾಡಿದ ಮೇಲೆ, ಸರ್ಕಾರದವರು ಏನಾದರೂ ಉತ್ತರವನ್ನು ಕೊಟ್ಟರೆ ಅದರ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರ ನನಗೆ ಇದೆ. ಈ ರೀತಿಯಾಗಿ ಮಾತನಾಡುವ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಅಡೆತಡೆ ಮಾಡುವುದು ಸರಿಯಲ್ಲ. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಸರ್ಕಾರ ಉತ್ತರ ಕೊಟ್ಟೇ ಕೊಡುತ್ತಾರೆ. ಸರ್ಕಾರದವರು ಉತ್ತರ ಕೊಡಲಿ. ಅದನ್ನು ಅಕ್ಸೆಪ್ಟ್ ಮಾಡುವುದು ಬಿಡುವುದರ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ. ಈ ರೀತಿ ಅಡೆತಡೆ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ತಿರಾ) :- ಅಧ್ಯಕ್ಷರೆ ನಾನು ಬಳ್ಳಾರಿ ಅಂದೆ ಅಷ್ಟೇ, 'ಕುಂಬಳಕಾಯಿ ಕಳ್ಳ ಅಂದರೆ ಹೆಗಲು ತಡವರಿಸಿಕೊಂಡರು' ಎನ್ನುವ ಗಾದೆ ಮಾತಿನ ರೀತಿಯಲ್ಲಿ ಬಳ್ಳಾರಿ ವಿಚಾರ ಎತ್ತಿದ ಕೂಡಲೇ ಎಲ್ಲರೂ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ. ಚರ್ಚೆ ಬೇಕಾಗಿಲ್ಲ. ಸ್ವಲ್ಪ ತಾಳ್ಮೆ ಇರಲಿ. ಅವರೂ ಸಹಕಾರ ಕೊಡುತ್ತಾರೆ. ದಯವಿಟ್ಟು ತಾವೆಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಸಭಾಧ್ಯಕ್ಷರೆ, ಈ ಸದನದಲ್ಲಿ ಇವತ್ತು ನಿಮ್ಮ ಎದುರಿಗೆ ಏನು ನಡೆಯುತ್ತಿದೆ ನೀವೇ ನೋಡಿ. ಇವತ್ತು ಬಳ್ಳಾರಿಯ ವಿಷಯ ಪ್ರಸ್ತಾಪ ಮಾಡಿದ ಕೂಡಲೇ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದಾರೆ. ಮಾನ್ಯ ಸಚಿವರು ಬಳ್ಳಾರಿಯಿಂದ ಬಂದಿರತಕ್ಕಂತಹವರು.

(ಗೊಂದಲ)

ಅಧ್ಯಕ್ಷರು :- ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ. ಚರ್ಚೆ ಬೇಕಾಗಿಲ್ಲ. ಸ್ವಲ್ಪ ತಾಳ್ಮೆ ಇರಲಿ. ಅವರು ಸಹಕಾರ ಕೊಡುತ್ತಾರೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಸಭಾಧ್ಯಕ್ಷರೆ, ಈ ಸದನದಲ್ಲಿ ಇವತ್ತು ನಿಮ್ಮ ಎದುರಿಗೆ ಏನು ನಡೆಯುತ್ತಿದೆ ನೀವೇ ನೋಡಿ. ಇವತ್ತು ಬಳ್ಳಾರಿ ವಿಷಯ ಪ್ರಸ್ತಾಪ ಮಾಡಿದ ಕೂಡಲೇ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ :- ಅವರು ಒಂದು Adjournment motion move ಮಾಡಿದ್ದಾರೆ. ಉದ್ದೇಶ ಏನು ಇದೆ ಎಂದರೆ ತಮ್ಮ ಮನವೊಲಿಸಿ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವುದು ಅವರ ಮನವಿ. ಅವರು Preliminary submission ಮಾಡುತ್ತಿದ್ದಾರಷ್ಟೆ. ಅದಕ್ಕೆ ಅಡ್ಡಿ ಮಾಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ :- ಬಳ್ಳಾರಿಯ ವಿಚಾರದ ಬಗ್ಗೆ, ಅಲ್ಲಿನ Uncrowned kings ಇದ್ದಾರಲ್ಲಾ, ಅವರ ಬಗ್ಗೆ ಹೇಳಿದ ತಕ್ಷಣ ಈಗ ತಮ್ಮ ಎದುರಿಗೆ ಏನು ನಡೆಯಿತು ಎಂಬುದನ್ನು ತಾವೇ ನೋಡಿದ್ದೀರಿ. ಬಳ್ಳಾರಿ ಎಂದು ಹೇಳಿದ ತಕ್ಷಣ, ಶಾಸಕರಾಗಿರತಕ್ಕಂಥವರು, ಸಚಿವರಾಗಿರತಕ್ಕಂಥವರು ಎಲ್ಲರನ್ನೂ ಪ್ರಚೋದನೆ ಮಾಡಿ ಕೂತಿದ್ದವರೆಲ್ಲರನ್ನೂ ಎಬ್ಬಿಸಿ ಬೆದರಿಸತಕ್ಕಂಥ ದೃಶ್ಯ ತಮ್ಮ ಎದುರಿಗೆ ನಡೆಯುತ್ತಿರುವುದನ್ನು ನೋಡಿದರೆ, ಇನ್ನು ಬಳ್ಳಾರಿಯಲ್ಲಿ ಏನು ನಡೆದಿದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್ :- ಮಾತನಾಡುವುದಕ್ಕೆ ಅವಕಾಶ ಕೊಡಿ. ಸ್ವಲ್ಪ ಡಿಸಿಪ್ಲೀನ್ ಬೇಕು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಜಯಚಂದ್ರರವರೇ, ನೀವು ನಿಮ್ಮ ಮಾತನ್ನು ಮುಂದುವರೆಸಿ. ಮಾನ್ಯ ಶಿವಲಿಂಗೇಗೌಡರೇ ದಯವಿಟ್ಟು ನೀವು ಸಹ ಕುಳಿತುಕೊಳ್ಳಿ. ಈಗ ಸುಮ್ಮನೆ ಅವರು ಕುಳಿತಿದ್ದಾರೆ, ಮತ್ತೆ ಅವರನ್ನು ಎಬ್ಬಿಸಬೇಡಿ. ಮಾನ್ಯ ರಾಜುಗೌಡರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಗಡಿಯಲ್ಲಾಗಿರುವಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಜಯಚಂದ್ರರವರು ಮಾತನಾಡುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇಣುಕಾಚಾರ್ಯರವರೇ ದಯವಿಟ್ಟು ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ. ಶ್ರೀ ಎಂ.ಟಿ.ಕೃಷ್ಣಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರು. ಗಡಿ ವಿಚಾರದಲ್ಲಿ ಒಂದು ಇಂಚು ಜಾಗ ವ್ಯತ್ಯಾಸವಾದರೂ ಕೂಡ ನಾನು ಬಿಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ನಾನು ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇವಲ ಒಂದು ಇಂಚಲ್ಲ, 35 ಕಿ.ಮೀ.ನಷ್ಟು ಅವ್ಯಾಹತವಾಗಿ ಇವತ್ತು ಗಣಿಗಾರಿಕೆ ನಡೆಯುತ್ತಿದೆ. ಆಂಧ್ರದ ಓಬಳಾಪುರಂ ಎನ್ನತಕ್ಕಂಥ ಕಂಪನಿಯವರು ಕರ್ನಾಟಕಕ್ಕೆ ಲಗ್ಗೆ ಇಟ್ಟು 34 ಕಿ.ಮೀ.ಗಳಷ್ಟು ಜಾಗವನ್ನು ಆಕ್ರಮಿಸಿ ಸುಮಾರು 980 ಮೀಟರ್ ಎತ್ತರ ಇರತಕ್ಕಂಥ ಆ ಬೆಟ್ಟಗುಡ್ಡಗಳನ್ನು ಕೂಡ ನೆಲಸಮ ಮಾಡಿ ಇವತ್ತು ಸಂಪೂರ್ಣವಾಗಿ ಅಲ್ಲಿರತಕ್ಕಂಥ ಮಣ್ಣಿನ ಸಾಗಾಣಿಕೆ ಮಾಡುತ್ತಿದ್ದಾರೆ.

(ಗೊಂದಲ)

ನಾನು ಲೋಕಾಯುಕ್ತ ವರದಿಗೆ ಸಂಬಂಧಪಟ್ಟಂಥ ವಿಚಾರವನ್ನು ಮಾತನಾಡುತ್ತಿದ್ದೇನೆ. ಬೇರೆ ಯಾವ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಕರುಣಾಕರರೆಡ್ಡಿಯವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಜಯಚಂದ್ರರವರೇ, ನಿಮ್ಮ ನಿಲುವಳಿ ಸೂಚನೆಯ ವಿಷಯವನ್ನು ನೀವು ತೆಗೆದುನೋಡಿ. ಅಲ್ಲಿ ಏನು ವಿಷಯ ಪ್ರಸ್ತಾಪ ಮಾಡಿದ್ದೀರಿ ಅದರಲ್ಲಿ Specific ಆಗಿ ಯಾವುದೇ ಕಂಪನಿ ಹೆಸರಿನ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನಿಲುವಳಿ ಸೂಚನೆಯಲ್ಲಿ ಲೋಕಾಯುಕ್ತ ವರದಿಯನ್ನು ನಾನು ಹೇಳಿದ್ದೇನೆ.

ಅಧ್ಯಕ್ಷರು :- ಲೋಕಾಯುಕ್ತ ವರದಿಯನ್ನು Refer ಮಾಡಿದ್ದೀರಿ. ಆದರೆ, Specific ಆಗಿಕಂಪನಿಯ ಹೆಸರನ್ನು mention ಮಾಡಿಲ್ಲ. ಪ್ರಸ್ತಾಪ ಮಾಡುವುದಿದ್ದರೆ ದಯವಿಟ್ಟು ಅದರ ಬಗ್ಗೆ ಮೊದಲೇ ಮಾಹಿತಿಯನ್ನು ಕೊಡಿ. ನೇರವಾಗಿ ಯಾವುದೇ ಕಂಪನಿ ಬಗ್ಗೆ ಪ್ರಸ್ತಾಪ ಮಾಡುವುದಾದರೆ atleast ಅದರ ಬಗ್ಗೆ ಮಾಹಿತಿಯನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ :- ಲೋಕಾಯುಕ್ತ ವರದಿಯ ಬಗ್ಗೆ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ನೀವು ಅನುಮತಿಯನ್ನು ಕೊಡಬೇಕು ಎಂದು ನಿಮ್ಮ ಮನವೊಲಿಸುವ ಪ್ರಯತ್ನ ನಾನು ಮಾಡುತ್ತಿದ್ದೇನೆ, ಅದಕ್ಕೆ ಲೋಕಾಯುಕ್ತ ವರದಿಯೇ ಆಧಾರ.

ಶ್ರೀ ಸುರೇಶ್‌ಕುಮಾರ್ ಎಸ್. (ಕಾನೂನು ಸಂಸದೀಯ ವ್ಯವಹಾರ, ಮಾನವ ಹಕ್ಕುಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು) :- ಈಗ ಹಿರಿಯ ಸದಸ್ಯರಾದಂಥ ಮಾನ್ಯ ಟಿ.ಬಿ.ಜಯಚಂದ್ರರವರು ನಿಲುವಳಿ ಸೂಚನೆಯನ್ನು ಇಲ್ಲಿ ಮಂಡಿಸಿದ್ದೀರಿ. ತಾವು ಹಿರಿಯ ಸದಸ್ಯರು ಎಂದು ನಮಗೆಲ್ಲರಿಗೂ ಕೂಡ ಚೆನ್ನಾಗಿ ಗೊತ್ತಿದೆ. ತಾವು ಅನುಮತಿ ಕೇಳುವಾಗ, ಈ ಒಂದು ಸೂಚನೆ ಮೇಲೆ ಮಾತನಾಡುವಾಗ, can you go on merits ಅನ್ನುವುದು ಒಂದು ಪ್ರಶ್ನೆ. ಈ ನಿಲುವಳಿ ಸೂಚನೆಯನ್ನು ಮಂಡಿಸಲು ಏಕೆ ಅವಕಾಶ ಕೊಡಬೇಕು ಎನ್ನುವುದನ್ನು ಹೇಳಬೇಕು. ಎರಡನೇಯದು ಸಭಾಧ್ಯಕ್ಷರೆ, ತಾವು ಆಗಲೇ ಗಮನವನ್ನು ಸೆಳೆದಿದ್ದೀರಿ. ಅದೇನೆಂದರೆ, Adjournment motion to discuss an enquiry report as a whole has been held as not relating to a specific matter. ಇಡೀ ಲೋಕಾಯುಕ್ತ ವರದಿಯನ್ನು ನಾನು ಇಲ್ಲಿ ಇಡುತ್ತೇನೆ, ಅದರ ಬಗ್ಗೆ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುತ್ತೇನೆ ಎಂದರೆ ಅದಕ್ಕೆ ಅವಕಾಶ ಇಲ್ಲ. ನೀವು ಚರ್ಚೆ ಮಾಡುವುದು ಅದು ಬೇರೆ ವಿಚಾರ. ನಿಲುವಳಿ ಸೂಚನೆ ಮೂಲಕ ತಂದು ಆ ಪೀಠಿಕೆ ಸಂದರ್ಭದಲ್ಲಿ merits ಮೇಲೆ Argument ಮಾಡುವುದು ಸೂಕ್ತವಾದುದಲ್ಲ. ಎರಡನೆಯದಾಗಿ, ಇಡೀ ಲೋಕಾಯುಕ್ತ report ಅನ್ನು ನಿಲುವಳಿ ಸೂಚನೆಯ ಒಂದು ವಿಷಯವನ್ನಾಗಿ ಮಾಡುವುದು ನಮ್ಮ ಸಂಪ್ರದಾಯದಲ್ಲಿ ಅಥವಾ ಪದ್ಧತಿಯಲ್ಲಿ ಇಲ್ಲ ಹಾಗೂ rules ನಲ್ಲಿ ಕೂಡ ಇಲ್ಲ. ಸಭಾಧ್ಯಕ್ಷರೆ, ನೀವು ಈ ವಿಷಯದ ಮೇಲೆ ನಿರ್ಧಾರ ತೆಗೆದುಕೊಳ್ಳುವುದು ತಮ್ಮ ವಿವೇಚನೆಗೆ ಬಿಟ್ಟ ವಿಷಯ. ತಾವು ಯಾವ ರೀತಿ ನಿರ್ಧಾರವನ್ನಾದರೂ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಯಾವುದೇ ರೀತಿಯಲ್ಲಿ ಪ್ರತಿಷ್ಠೆಯ ಪ್ರಶ್ನೆಯಾಗಿ ಇದನ್ನು ಚರ್ಚೆ ಮಾಡುವುದು ಬೇಡ.

Sri S. Suresh Kumar :- Let us go by Rules and Regulations.

ಶ್ರೀ ಟಿ.ಬಿ. ಜಯಚಂದ್ರ :- ಈಗ ಏನಾಗಿದೆ ಎಂದರೆ ಗಣಿಗಾರಿಕೆ ಎನ್ನುವುದು ಕೇವಲ ಒಬ್ಬರ ಅಧಿಕಾರದಲ್ಲಿ ಆಗಿರುವಂತಹ ಪ್ರಶ್ನೆ ಅಲ್ಲ.

ಶ್ರೀ ಜಿ. ಕರುಣಾಕರರೆಡ್ಡಿ :- ಅದರ ಬಗ್ಗೆ ಚರ್ಚೆಯಾಗುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಚರ್ಚೆಗೆ ಒಪ್ಪಿಕೊಂಡರೆ ನಾವು ಅದರಲ್ಲಿ ಭಾಗವಹಿಸುತ್ತೇವೆ. ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತೇವೆ. Subject ಗೊತ್ತಿಲ್ಲದೆ... .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಈಗ ಮಾನ್ಯ ಸಚಿವರು ಚರ್ಚೆಗೆ ಅಭ್ಯಂತರವಿಲ್ಲ ಎಂದು ಒಪ್ಪಿಗೆ ಕೊಟ್ಟಿದ್ದಾರೆ. ಆ ಮಾತಿಗೆ ತಾವು ಅನುಮತಿಯನ್ನು ಕೊಡಬೇಕು. ಈಗ ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಸಭಾಧ್ಯಕ್ಷರೆ, ನಾನು ಸಭೆಯ ಗಮನಕ್ಕೆ point of order ಮುಖಾಂತರ ತರುವುದೇನೆಂದರೆ, ಮೊದಲನೆಯದು he cannot go on merits. ಎರಡನೆಯದು, Complete ಲೋಕಾಯುಕ್ತ report ಅನ್ನೇ ನಿಲುವಳಿ ಸೂಚನೆಯ ವಿಷಯವಾಗಿ ಮನವಿ ಮಾಡಿಕೊಳ್ಳುವುದಕ್ಕೆ it is not allowed. ನಿಮಗೂ ಚೆನ್ನಾಗಿ Rules and Regulations ಗೊತ್ತಿದೆ. ಕರುಣಾಕರ ರೆಡ್ಡಿಯವರು ಹೇಳಿದ ಹಾಗೆ ಚರ್ಚೆ ಮಾಡುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ಚರ್ಚೆಯನ್ನು ಯಾವ ತರಹ ಮಾಡಬೇಕು, ಯಾವ ಮೂಲಕ ಮಾಡಬೇಕು, ಪೀಠಿಕೆಯಲ್ಲಿ ಏನು ವಿಷಯ ಇದೆ ಅದರಂತೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಬಳ್ಳಾರಿ, ತುಮಕೂರು, ಚಿತ್ರದುರ್ಗದ Mines ವಿಚಾರ ಇಡೀ ದೇಶದಲ್ಲಿ ಚರ್ಚೆಯಾಗುತ್ತಿದೆ. ಇದು ಒಂದು ರಾಜ್ಯಕ್ಕೆ ಸಂಬಂಧಿಸಿದ ವಿಚಾರವಲ್ಲ. ಆಂಧ್ರಪ್ರದೇಶಕ್ಕೆ ಸಂಬಂಧಿಸಿದಂಥವುಗಳು ಇವೆ. ಪೋರ್ಟ್‌ಗಳು ಇರುವಂಥದ್ದು ಗೋವಾದಲ್ಲಿ, ಕಾರವಾರದಲ್ಲಿ, ಮದ್ರಾಸ್‌ನಲ್ಲಿ. ಆದರೆ, ಇವತ್ತು Permitಅನ್ನು issue ಮಾಡತಕ್ಕವರು ಯಾರು? Mining License ಕೊಡುವುದು ಕೇಂದ್ರ ಸರ್ಕಾರ. ಈ ವಿಚಾರಕ್ಕೆ ಏಕೆ ಇಷ್ಟು ಗಹನ ಬಂದಿದೆಯೆಂದರೆ ಇದು ಒಂದು ರಾಜ್ಯಕ್ಕೆ ಸೀಮಿತವಾಗಿರತಕ್ಕ ವಿಚಾರವಲ್ಲ. ನಿಲುವಳಿ ಸೂಚನೆಗೆ ಒಪ್ಪಿಗೆ ಕೊಟ್ಟರೆ, ಇದನ್ನು ಚರ್ಚೆ ಮಾಡುವುದರಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚು ಸಹಾಯವಾದಂತಾಗುತ್ತದೆ. ಲೋಕಾಯುಕ್ತ ವರದಿ ಇರಬಹುದು, ಅದಲ್ಲದೆ ಬೇರೆ ಬೇರೆ ಮಾಹಿತಿಯನ್ನು ನಾವು ಸಭೆಗೆ ಕೊಡಲಿಕ್ಕೆ ತಯಾರಿದ್ದೇವೆ. ಅದರ ಆಧಾರದ ಮೇಲೆ ಚರ್ಚೆ ಮಾಡಬಹುದು.

ಒಂದು ಕಡೆ ನಿನ್ನೆ ರಾಜ್ಯಪಾಲರ ಭಾಷಣದ ಮೂಲಕ ರಾಜ್ಯದಲ್ಲಿ ಸಂಪನ್ಮೂಲ ಕಡಿಮೆಯಾಗಿದೆ ಎನ್ನುವ ವಿಷಯ ಅರ್ಥವಾಯಿತು. ಕರ್ನಾಟಕದಲ್ಲಿ ಸಂಪನ್ಮೂಲ ಕಡಿಮೆಯಾಗಬೇಕಾಗಿಲ್ಲ. ಸರ್ಕಾರ ಸ್ವಲ್ಪ ಎಚ್ಚೆತ್ತುಕೊಂಡು ಕೆಲಸ ಮಾಡಿದ್ದೇ ಆದರೆ, ಇನ್ನು ಮುಂದೆಯಾದರೂ ಪ್ರಯತ್ನ ಮಾಡಿದರೆ ಬಹುಶ: ಸಂಪನ್ಮೂಲ ಕೊರತೆ ಯಾಗಬೇಕಾಗಿಲ್ಲ, ಅಷ್ಟು ಸಂಪನ್ಮೂಲ ನಮ್ಮಲ್ಲಿದೆ. ಆ ಸಂಪತ್ತು ಲೂಟಿಯಾಗುತ್ತಿದೆ. ಗಡಿಯಲ್ಲಿ ವಿವಾದವಾಗಿದೆ, ತೊಂದರೆಯಾಗುತ್ತಿದೆ. ಸಂಪನ್ಮೂಲ ದೃಷ್ಟಿಯಿಂದ, ರಾಜ್ಯದ ಜನರ ಹಿತದೃಷ್ಟಿಯಿಂದ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ.

ಲೋಕಾಯುಕ್ತ ವರದಿಯೇ ಅಲ್ಲ ನಮ್ಮಲ್ಲಿ Act ಇದೆ. Mineral Concession Rules ಇದೆ. Mining leasesನಲ್ಲಿ ಏನಾಗುತ್ತಿದೆ? Mining leasesಗೆ ಸಂಬಂಧಿಸಿದಂತೆ 1970-72 ರಲ್ಲಿ ಹೈಕೋರ್ಟ್ ನಿರ್ಣಯವಾಗಿದೆ. ಅದರ ಪ್ರಕಾರ ಓಬಳಾಪುರಂ ಗಡಿ ಭಾಗದಲ್ಲಿ ಯಾವುದೇ ಗಣಿಗಾರಿಕೆ ನಡೆಯಬಾರದೆಂದು ತೀರ್ಮಾನವಾಗಿತ್ತು. ಅವತ್ತು High court judgment ಆದರೂ ಕೂಡ ಇಲ್ಲಿಯವರೆಗೂ ಅದು ಜಾರಿ ಆಗಲಿಲ್ಲ. ಇವತ್ತು ಆಂಧ್ರ ಮತ್ತು ಕರ್ನಾಟಕದ ಗಡಿ ಮಧ್ಯದಲ್ಲಿರುವ ರೇಖೆಯನ್ನು ಗುರುತಿಸು ವುದಕ್ಕಾಗಲಿಲ್ಲ. ಆದರೂ ಕೂಡ ಗಣಿಗಾರಿಕೆ ಇಂದು ಅವ್ಯಾವಹತವಾಗಿ ನಡೆಯುತ್ತಿದೆ. ಅದನ್ನು ನಿಲ್ಲಿಸುವುದಕ್ಕಾಗಲಿಲ್ಲವೆಂದರೆ ಏನರ್ಥ ಎಂದು ಕೇಳಬೇಕಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಆಂಧ್ರ ಪ್ರದೇಶವನ್ನು ಆ ರಾಜ್ಯದವರು ನೋಡಿಕೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ. ಕರುಣಾಕರರೆಡ್ಡಿ :- ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಒಂದಕ್ಕೂ ಲೀಸ್ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು :- ದಯಮಾಡಿ ಎಲ್ಲರೂ **ಕುಳಿತುಕೊಳ್ಳಿ.**

ಶ್ರೀ ಕೆ. ಕರುಣಾಕರ ರೆಡ್ಡಿ :- ನೀವು 40-50 ವರ್ಷದಿಂದ ಏನು ಮಾಡುತ್ತಿದ್ದೀರಿ?

ಶ್ರೀ. ನೆ.ಲ. ನರೇಂದ್ರಬಾಬು :- ಗಣಿ ಒತ್ತುವರಿಯಾಗುತ್ತಿದೆ.. . . . .

(ಗೊಂದಲ)

ಅಧ್ಯಕ್ಷರು :- ನರೇಂದ್ರಬಾಬುರವರೆ, ದಯವಿಟ್ಟು **ಕುಳಿತುಕೊಳ್ಳಿ.**

ಶ್ರೀ ಕೆ.ಕರುಣಾಕರರೆಡ್ಡಿ :- ನೀವು 50 ವರ್ಷದಿಂದ ನಿದ್ರೆ **ಮಾಡುತ್ತಿದ್ದರಾ?**

ಶ್ರೀ ನೆ.ಲ. ನರೇಂದ್ರಬಾಬು :- ಇದರ ಬಗ್ಗೆ ಸಿ.ಬಿ.ಐ. **ತನಿಖೆ ಮಾಡಬೇಕು.**

ಅಧ್ಯಕ್ಷರು :- ನರೇಂದ್ರಬಾಬುರವರು ದಯಮಾಡಿ **ಕುಳಿತುಕೊಳ್ಳಿ.** ಮಾನ್ಯ ಸುರೇಶ್ ಕುಮಾರ್ ಅವರು ಒಂದು Point of Order ಎತ್ತಿದರು. ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. Relating to single specific matter. . . .

ಶ್ರೀ ಕೆ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಸಚಿವರು) :- ಮಾನ್ಯ ಟಿ.ಬಿ ಜಯಚಂದ್ರ ಅವರು ಓಬಳಾಪುರಂನಲ್ಲಿ ಅವ್ಯಾಹತವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಯಾವುದೇ ರೀತಿಯ ಆಧಾರವಿಲ್ಲ. ಕಳೆದ 60 ವರ್ಷಗಳಿಂದ ಗಣಿ ಲೂಟಿ ಮಾಡಿದವರು ಅವರು. ಆದರೆ ನಮ್ಮ ಮೇಲೆ ಹೇಳುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಒಂದು ಲೀಸ್‌ಗೂ ಅನುಮತಿ ಕೊಟ್ಟಿಲ್ಲ. ತಮ್ಮ ಅಧಿಕಾರಾವಧಿಯಲ್ಲಿಯೇ ಆ ಕೆಲಸ ಮಾಡಿದ್ದೀರಿ. ಈ ರಾಜ್ಯದ ಲೂಟಿ ಮಾಡಿರತಕ್ಕವರು ತಾವೇ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಜನಾರ್ಧನ ರೆಡ್ಡಿಯವರೇ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಯಾವುದೇ lease ಕೊಟ್ಟಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ನಾನು ಮುಖ್ಯಮಂತ್ರಿಗಳು lease ಕೊಟ್ಟಿದ್ದಾರೆಂದು ಆರೋಪ ಮಾಡುತ್ತಿಲ್ಲ. ಓಬಳಾಪುರಂ mines ಇವತ್ತು ಆಂಧ್ರಪ್ರದೇಶಕ್ಕೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದು. . . .

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ಇವತ್ತು ಮಾನ್ಯ ಸುರೇಶ್ ಕುಮಾರ್ ಅವರು ಒಂದು Point of order raise ಮಾಡಿದರು. ಅದೇನೆಂದರೆ, "Relating to a single specific matter, an Adjournment Motion to discuss an enquiry report as a whole has been held as not relating to a specific matter" ಎಂದು ರೈಸ್ ಮಾಡಿದರು. ಅದಕ್ಕೆ ತಾವು ಇದರ ಬಗ್ಗೆ ಏನು ಸ್ಪಷ್ಟೀಕರಣ ಕೊಡುತ್ತೀರಿ? ಏಕೆಂದರೆ, ಲೋಕಾಯುಕ್ತ Enquiry report ಆಧಾರದಿಂದ ತಾವು Adjournment motion ಕೊಟ್ಟಿದ್ದೀರಿ. ಅದು ಬರುವುದಿಲ್ಲವೆಂದು ಅವರು Point of order ರೈಸ್ ಮಾಡಿದ್ದಾರೆ. ಇದಕ್ಕೆ specific ಆಗಿ ತಾವು ಏನು ಹೇಳುತ್ತೀರಿ? ಸುರೇಶ್ ಕುಮಾರ್ ಅವರು ಶ್ರೀ ಮಲ್ಲೋತ್ತರವರ ಪುಸ್ತಕ refer ಮಾಡಿ ಹೇಳಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ :- ಮಾನ್ಯ ವಿರೋಧ ಪಕ್ಷದ ಉಪನಾಯಕರು,ಬಳ್ಳಾರಿ ಗಣಿಗಾರಿಕೆ ಬಗ್ಗೆ ಚರ್ಚಿಸಲು ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ. ಗಣಿಗಾರಿಕೆಯ ಬಗ್ಗೆ ಲೋಕಾಯುಕ್ತ ವರದಿ ಕೂಡ ಒಂದು. ಆದರೆ, ಬಳ್ಳಾರಿ ಮೈನ್ಸ್ ..

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ :- ನೀವು ಮಾತನಾಡಿ. ಬೇಡ ಎಂದು ಹೇಳುವುದಿಲ್ಲ.

(ಗೊಂದಲ)

ಡಾ॥ ಹೆಚ್.ಸಿ.ಮಹದೇವಪ್ಪ :- This is an issue pertaining to the State. ಲೋಕಾಯುಕ್ತವರು ಕೊಟ್ಟಿರುವ ಗಣಿಗಾರಿಕೆ ವರದಿಯೇನಿದೆ ಅದರ ಬಗ್ಗೆ ನಿಲುವಳಿ ಸೂಚನೆಯ ಮೂಲಕ ಅವಕಾಶ ಕೊಡಬೇಕು. ಯಾವ ರೀತಿಯಾಗಿ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿದೆ, ಇದರಿಂದ ರಾಜ್ಯದ ಬೆಳವಣಿಗೆ ಕುಂಠಿತವಾಗುತ್ತಿದೆ. ಈ ವಿಚಾರದ ಬಗ್ಗೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶವನ್ನು ಕೇಳುತ್ತಿದ್ದೇವೆ. ಯಾರಾದರು ಗಣಿಗಾರಿಕೆ ಮಾಡುವುದಾದರೆ ಕಾನೂನಿನ ಚೌಕಟ್ಟಿನಲ್ಲಿ ಮಾಡಲಿ, ಅದಕ್ಕೆ ಬೇಡವೆಂದು ಹೇಳುವುದಿಲ್ಲ. ಆದರೆ ಆ ರೀತಿ ಮಾಡದಿರುವ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯಲ್ಲಿ ಅವಕಾಶ ಕೊಡಬೇಕು.

ಅಧ್ಯಕ್ಷರು :- ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :- ಅನುಮತಿ ಪಡೆಯದೇ ಬೇಕಾದಷ್ಟು ಸಂಸ್ಥೆಗಳು ಅಲ್ಲಿ ಗಣಿಗಾರಿಕೆ ಮಾಡುತ್ತಿವೆ. ಓಬಳಾಪುರಂ ಎನ್ನುವ ಒಂದೇ ಒಂದು ಸಂಸ್ಥೆ ಹೆಸರನ್ನು ಹೇಳುವುದು ಸರಿಯಲ್ಲ. ಬೇಕಾದರೆ ಗಣಿಗಾರಿಕೆ ಬಗ್ಗೆ ಪ್ರಸ್ತಾಪ ಮಾಡಲಿ, ಒಂದು ಸಂಸ್ಥೆ ಬಗ್ಗೆ ಮಾತನಾಡುವುದು ಸರಿಯಲ್ಲ ಅದನ್ನು ಕಡತದಿಂದ ತೆಗೆದುಹಾಕುವುದು ಸೂಕ್ತ ಎಂದೆನಿಸುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :- ಅನಧಿಕೃತವಾದ ಗಣಿಗಾರಿಕೆ ಕರ್ನಾಟಕದಲ್ಲಿ ನಡೆಯುತ್ತಿದೆ. ಗಡಿಯಲ್ಲಿ ಒತ್ತುವರಿಯಾಗುತ್ತಿದೆ. ಅದನ್ನು ಪುಷ್ಠೀಕರಿಸುವುದಕ್ಕೋಸ್ಕರ..

ಶ್ರೀ ಎಸ್. ಸುರೇಶ್ ಕುಮಾರ್ :- ಜಯಚಂದ್ರರವರೆ ತಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. Before you proceed, ಇದನ್ನು ಬಹಳ specific ಆಗಿ Rules of Procedure ಪ್ರಕಾರ ಮಾಡಬೇಕು. ನೀವೇ ಹೇಳಿದ ಪ್ರಕಾರ, ಮಾನ್ಯ ಲೋಕಾಯುಕ್ತರು, ರಾಜ್ಯದ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳು ವರದಿಗಳನ್ನು ಸಲ್ಲಿಸಿರುತ್ತಾರೆ, ಅದು ನಿಮಗೆ ಆಹಾರ. ಈ ನಿಲುವಳಿ ಸೂಚನೆಗೆ ಮುಖ್ಯವಾದದ್ದು ಆ ಎರಡು ವರದಿಗಳು. ಕಾಂಗ್ರೆಸ್ ಪಕ್ಷದ ಸತ್ಯ ಶೋಧನ ಸಮಿತಿ ಕೂಡ ಸ್ಥಳದ ಸಾಕ್ಷಾತ್ ಭೇಟಿ ನಡೆಸಿ ಆರೋಪಗಳನ್ನು ಪುಷ್ಠೀಕರಿಸುತ್ತಿದೆ ಎಂದು, ಈ ಎಲ್ಲಾ ರಿಪೋರ್ಟ್ಸ್ ಅನ್ನು ಇಟ್ಟುಕೊಂಡು ಇವತ್ತು ನೀವು ನಿಲುವಳಿ ಸೂಚನೆ ತಂದಿದ್ದೀರಿ, ನಾನು ಮತ್ತೆ ಸಭಾಧ್ಯಕ್ಷರಿಗೆ ಕೇಳಿಕೊಳ್ಳುತ್ತಿರುವುದು ಏನೆಂದರೆ, we are not against the debate. Discussion ಆಗಲಿ, ಚರ್ಚೆಯಾಗಲಿ, ಆದರೆ ಯಾವ ರೂಪದಲ್ಲಾಗಬೇಕು? Adjournment motion ಮುಖಾಂತರ ಆಗಬೇಕೇ ಅಥವಾ ಬೇರೆ ರೂಪದಲ್ಲಿ ಚರ್ಚೆಯಾಗಬೇಕೇ ಎನ್ನುವುದೇ ನನ್ನ Point of Order ಈ ಬಗ್ಗೆ ತಾವು Ruling ಕೊಡಿ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆ ವಿಚಾರದಲ್ಲಿ ನಾಲ್ಕಾರು ವರದಿಗಳು ಇವೆ ಎಂಬುದನ್ನು ಪುಷ್ಠಿಕರಿಸುವುದಕ್ಕೋಸ್ಕರ ಮಾನ್ಯ ಜನಾರ್ದನ ರೆಡ್ಡಿಯವರು "ಅದು ಯಾವತ್ತಿನಿಂದಲೂ ನಡೆಯುತ್ತಿದೆ. ನಮ್ಮ ಹತ್ತಿರ ಆ ಕುರಿತಾದ ದಾಖಲೆಗಳು ಇವೆ"

ಎಂಬ ಮಾತನ್ನಾಡಿದರು. ದಯಮಾಡಿ ನಾನು ಹೇಳುತ್ತೇನೆ: ನಾವು ಈ ವಿಚಾರದಲ್ಲಿ ಹಿಂದು-ಮುಂದು ಹೋಗುವ ಪ್ರಶ್ನೆಯಲ್ಲ, ರಾಜ್ಯದ ಬೊಕ್ಕಸದ ದೃಷ್ಟಿಯಿಂದ ತಮ್ಮ ಹತ್ತಿರ ಏನೇನು ದಾಖಲಾತಿಗಳಿವೆಯೋ, ಅದೆಲ್ಲವನ್ನೂ ಇಡಿ. ನಾವು ಚರ್ಚಿಸುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು :- ಜಯಚಂದ್ರರವರೆ, ಮಾನ್ಯ ಸುರೇಶ್‌ಕುಮಾರ್‌ರವರ ಒಂದು ಪಾಯಿಂಟ್ ಆಫ್ ಆರ್ಡರ್ ಏನಿದೆ, ಅದಕ್ಕೆ ಒಂದು ಸ್ಪಷ್ಟೀಕರಣ ನೀಡಿ. ನಿಮ್ಮ ಪ್ರಿಲಿಮಿನರಿ ಸಬ್‌ಮಿಷನ್ ಏನಿದೆ, ಅದನ್ನು ಹೇಳಿ, ಸರ್ಕಾರದವರು ಉತ್ತರ ಕೊಡಲಿ. ಅನಂತರ, ಯಾವ ರೀತಿ ತೆಗೆದುಕೊಳ್ಳಬೇಕೋ, ಆ ಕುರಿತಂತೆ ನಾನು ನಿರ್ಣಯ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈಗ ಏನಾಗಿದೆಯೆಂದರೆ, ಬಿಜೆಪಿಗೂ ಗಣಿಗಾರಿಕೆಗೂ ಸಾಕಷ್ಟು ನಂಟು ಇದೆ ಎಂಬುದು ಇಡೀ ದೇಶಕ್ಕೆ ಗೊತ್ತಿರುವ ವಿಚಾರ.

(ಗದ್ದಲ)

ಅಧ್ಯಕ್ಷರು :- ಜಯಚಂದ್ರರವರೆ, ಒಂದು ನಿಮಿಷ.

ಶ್ರೀ ಆರ್. ಅಶೋಕ್ :- ಮಾನ್ಯ ಅಧ್ಯಕ್ಷರೆ, ಇಡೀ ಕರ್ಮಕಾಂಡ ಗಣಿಗಾರಿಕೆಯ ಕಾಂಗ್ರೆಸ್‌ದು ಲೋಕಾಯುಕ್ತ ವರದಿಯಲ್ಲೂ ಇರುವುದು ಅದೇ.

ಅಧ್ಯಕ್ಷರು :- ಜಯಚಂದ್ರರವರೆ, ಕಟ್ಟಾರವರೆ, ಈ ವಿಷಯದ ಬಗ್ಗೆ ಬೆಳಕು ಚೆಲ್ಲಬೇಕೆಂದು ನಿಮಗೇನಾದರೂ ಅಪೇಕ್ಷೆ ಇದ್ದರೆ. . . .

ಶ್ರೀ ಆರ್. ಅಶೋಕ್ :- ಜನತಾದಳದ್ದೂ ಸೇರಿ ಜನತಾದಳದ್ದೂ ಬಹಳಷ್ಟಿದೆ.

ಅಧ್ಯಕ್ಷರು :- ಯಾವುದೋ ಒಂದು ರಾಜಕೀಯ ಪಕ್ಷದ ಹೆಸರು ತೆಗೆದುಕೊಂಡು ಇಲ್ಲಿ ಹೇಳುವುದು ಸರಿಯಿಲ್ಲ. ನೀವು ಬಿಜೆಪಿ ಎನ್ನುತ್ತೀರಿ, ನಾಳೆ ಅವರು ಕಾಂಗ್ರೆಸ್ ಎನ್ನುತ್ತಾರೆ. ರಾಜಕೀಯ ಪಕ್ಷದ ಪ್ರಸ್ತಾಪ ಇಲ್ಲಿ ಬರಬಾರದು. ಯಾವುದೇ ಒಂದು ಸ್ಪೆಸಿಫಿಕ್ ವಿಷಯವಿದ್ದರೆ, ನೀವು ಪ್ರಸ್ತಾಪಿಸಿ. ಆದರೆ, ಯಾವುದೋ ಒಂದು ರಾಜಕೀಯ ಪಕ್ಷದ ಹೆಸರು ತೆಗೆದುಕೊಂಡು ಮಾತನಾಡುವುದು, ಚರ್ಚಿಸುವುದು ಸರಿಯಿಲ್ಲ. ನಾಳೆ ಅವರು ಕಾಂಗ್ರೆಸ್ ಪಾರ್ಟಿ ಎಂದು ಹೇಳುತ್ತಾರೆ, ಮತ್ತೊಬ್ಬರು

ಜ.ದಿ(ಎಸ್) ಎಂದು ಹೇಳುತ್ತಾರೆ. ಇದರಲ್ಲಿ ಅರ್ಥವಿಲ್ಲ. ಇದರಲ್ಲಿ ರಾಜಕೀಯ ಪಕ್ಷಗಳನ್ನು ಏಕೆ ತೆಗೆದುಕೊಂಡು ಬರುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ :- ಬಹಳ ಪ್ರಧಾವವಾಗಿರುವ ಜಿಲ್ಲೆಯನ್ನು. . .

ಅಧ್ಯಕ್ಷರು :- ಗಣಿಗಾರಿಕೆಯಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ಒಂದನ್ನೇ ಏಕೆ ಸ್ಪೆಸಿಫಿಕ್ಕಾಗಿ ಹೇಳುತ್ತೀರಿ? ಇದು ಯಾವುದೋ ಒಂದು ಪಾರ್ಟಿಗೆ ಸಂಬಂಧಿಸಿದ್ದಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಡಾ: ಹೆಚ್.ಸಿ.ಮಹದೇವಪ್ಪನವರು ಮಾತನಾಡಿದ್ದು ಕೇಳಿಸಲಿಲ್ಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ, ಪ್ಲೀಸ್.

ಶ್ರೀ ಹೆಚ್.ಸಿ. ಬಾಲಕೃಷ್ಣ :- ದಯಮಾಡಿ ಸಿ.ಬಿ.ಐ. ತನಿಖೆಗೆ ವಹಿಸಬೇಕು.

ಅಧ್ಯಕ್ಷರು :- ಚರ್ಚಿಸಿ ಎಂದರೆ ಸೀದಾ ಸಿ.ಬಿ.ಐ.ಗೇ ಹೋಗುತ್ತೀರಲ್ಲ. ಬಾಲಕೃಷ್ಣರವರೆ, ಕುಳಿತುಕೊಳ್ಳಿ.

(ಗದ್ದಲ)

ಶ್ರೀ ರಾಮಚಂದ್ರಗೌಡ :- ಮಾನ್ಯ ಅಧ್ಯಕ್ಷರೆ, ನನ್ನದ್ದೊಂದು ಪಾಯಿಂಟ್ ಆಫ್ ಆರ್ಡರ್. ಅದೇನೆಂದರೆ ನಿಲುವಳಿ ಸೂಚನೆ ತರುವಾಗ, ನಿಯಮ 62ರ ಪ್ರಕಾರ ವಿಷಯ ಸಾರ್ವಜನಿಕ ಮಹತ್ವದ್ದಾಗಿರಬೇಕು, ಇದೆ. ಆದರೆ, "ನಿಲುವಳಿ ಸೂಚನೆ ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು." ಇದು ಇತ್ತೀಚೆಗೆ ನಡೆದಿರುವುದಲ್ಲ. ಗಣಿಗಾರಿಕೆಯು ಅನೇಕ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ. ನಮ್ಮ ಸರ್ಕಾರ ಬಂದ ನಂತರ ಯಾವುದೇ ಗಣಿಗಾರಿಕೆಗೆ ಅವಕಾಶ ಕೊಟ್ಟಿಲ್ಲದೇ ಇರುವುದರಿಂದ ಈ ವಿಷಯವನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅವಕಾಶವಿಲ್ಲವೆನ್ನುವ ಮಾತು ಸೂಕ್ಷ್ಮವಾಗಿದೆ. "ನಿಲುವಳಿ ಸೂಚನೆಯು ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು". ಇದು ಇತ್ತೀಚೆಗೆ ನಡೆದ ವಿಷಯವಲ್ಲ. ಆದಕಾರಣ, ಈ ವಿಷಯವನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅವಕಾಶವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ತನ್ವೀರ್ ಸೇಠ್ :- . . .ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ :- ಇದು ಇತ್ತೀಚೆಗೆ ನಡೆದಂತಹ ಘಟನೆ. ಹಿಂದೆ ಮುಖ್ಯಮಂತ್ರಿಯಾಗಿದ್ದಂತಹವರು ಒಂದು ಹೇಳಿಕೆ ಕೊಟ್ಟರು. "ಬಳ್ಳಾರಿ ಸಚಿವರಿಂದ ಇವತ್ತು ಅದಿರು ಲೂಟಿಯಾಗುತ್ತಿದೆ, ಒಂದು ಭಯಾನಕ ವಾತಾವರಣ ಸೃಷ್ಟಿಯಾಗಿದೆ. ಎಲ್ಲರೂ ಅವರಿಗೆ ಗುಲಾಮರಂತೆ ವರ್ತಿಸಬೇಕು" ಎಂದು ಮುಖ್ಯಮಂತ್ರಿಯಾಗಿದ್ದಂತಹವರು ಅವತ್ತು ಪ್ರಸ್ತಾಪಿಸಿದರು. ಅದರಲ್ಲಿ ಸತ್ಯವಿಲ್ಲವೆಂದು ಹೇಳುತ್ತೀರಾ? ಅವರು ಬೇಜವಾಬ್ದಾರಿತನದಿಂದ ಆ ಮಾತನ್ನು ಹೇಳಿದ್ದಾರೆಂದು ಹೇಳುತ್ತೀರಾ?

ಶ್ರೀ ಜಿ. ಜನಾರ್ದನ ರೆಡ್ಡಿ :- ಈ ರಾಜ್ಯವನ್ನು ಲೂಟಿ ಮಾಡಿದ್ದು ಆ ಮುಖ್ಯಮಂತ್ರಿ, ನಾವಲ್ಲ, ನಮ್ಮ ಮುಖ್ಯಮಂತ್ರಿ ಅಲ್ಲ.

(ಗೊಂದಲ)

ಅಧ್ಯಕ್ಷರು :- ಈ ವಿಷಯವನ್ನು ಬೇರೆ ರೂಪದಲ್ಲಿ ತಂದು ಸ್ಪೆಸಿಫಿಕ್ ಆಗಿ. .

ಶ್ರೀ ಜಿ. ಜನಾರ್ದನ ರೆಡ್ಡಿ :- ಲೂಟಿ ಮಾಡಿರುವುದು ಆ ಮುಖ್ಯಮಂತ್ರಿ ಮತ್ತು ನೀವು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅಧ್ಯಕ್ಷರೆ, ಯಾರು ಲೂಟಿ ಮಾಡಿದ್ದಾರೆಂದು ಅವರು ಹೇಳುತ್ತಿದ್ದಾರೋ, ದಯಮಾಡಿ ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡಿ.

(ಗೊಂದಲ)

ಶ್ರೀ ಆರ್. ಅಶೋಕ್ :- ಗಣಿಗಾರಿಕೆಗೆ ಧರ್ಮಸಿಂಗ್‌ರವರ ಕಾಲದಲ್ಲಿಯು ಅವಕಾಶ ಕೊಟ್ಟರು, ಕುಮಾರಸ್ವಾಮಿಯವರು ಕೊಟ್ಟರು, ನಾವು ಏನೂ ಕೊಡಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನಾವು ಆ ಮಾತನ್ನು ಹೇಳುತ್ತಿಲ್ಲ. ಧರ್ಮಸಿಂಗ್‌ರವರ ಕಾಲದಲ್ಲಿಯೇ ಆಗಲಿ, ಕುಮಾರಸ್ವಾಮಿಯವರ ಕಾಲದಲ್ಲಿಯೇ ಆಗಲಿ, ಚರ್ಚೆಯಾಗಲಿ.

(ಗದ್ದಲ)

ಶ್ರೀ ಜಿ. ಜನಾರ್ದನರೆಡ್ಡಿ :- ಸಭಾಧ್ಯಕ್ಷರೆ, ಒಂದು ನಿಮಿಷ. ಮೊಟ್ಟಮೊದಲನೆಯದಾಗಿ, ಕಾಂಗ್ರೆಸ್ ಪಕ್ಷದ ಆಡಳಿತದಿಂದಿಡಿದು, ಜೆ.ಡಿ(ಎಸ್)ನಿಂದಿಡಿದು, ಅವರು ಏನೇನು ಮಾಡಿದ್ದಾರೆನ್ನುವುದು ಒಂದು ಕಡೆ. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ನಂತರ ಗಣಿಗಾರಿಕೆ ವಿಚಾರದಲ್ಲಿ ಅತ್ಯುತ್ತಮವಾದ ಮೈನಿಂಗ್ ಪಾಲಿಸಿ ತಂದು, ಈ ಕ್ಷಣದವರೆಗೂ ಯಾವುದೇ ಒಬ್ಬ ವ್ಯಕ್ತಿಗಾಗಲಿ, ಸಂಸ್ಥೆಗಾಗಲಿ, ಒಂದೇ ಒಂದು ಲೀಸ್ ಕೊಟ್ಟಿಲ್ಲ. ಇನ್ನೊಂದು ವಿಚಾರವೇನೆಂದರೆ, ಅವರು ಒಂದು ಮಾತನ್ನು ಹೇಳಿದ್ದಾರೆ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದಂತಹವರು, ಬಳ್ಳಾರಿಯಲ್ಲಿರುವ ನಮ್ಮ ಕುಟುಂಬವು ಇವತ್ತು ಅಕ್ರಮವೆಸಗುತ್ತಿದೆ, ಕೋಟ್ಯಂತರ ರೂಪಾಯಿ ಸಂಪಾದನೆ ಮಾಡುತ್ತಿದೆ, ನಾವು ಎಲ್ಲರ ಬಾಯಿ ಮುಚ್ಚಿಸುತ್ತಿದ್ದೇವೆ, ನಾವು ಎಲ್ಲರನ್ನೂ ಕಂಟ್ರೋಲ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. xxx xxx xxx xxx

ಅಧ್ಯಕ್ಷರು :- ಈ ರೀತಿ ಪ್ರಸ್ತಾಪಿಸಬಾರದು. ಯಾವುದೇ ಒಬ್ಬ ಮುಖ್ಯಮಂತ್ರಿ ಬಗ್ಗೆಯಾಗಲಿ ಅಥವಾ ಯಾವುದೇ ರಾಜಕೀಯ ಪಕ್ಷದ ಬಗ್ಗೆಯಾಗಲಿ, ಯಾರೂ ಪ್ರಸ್ತಾಪಿಸುವುದು ಸರಿಯಲ್ಲ. ಸದನದಲ್ಲಿ ಈ ರೀತಿ ಮಾತನಾಡುವುದು ಸರಿಯಲ್ಲ. ಏನಾದರೂ ಸ್ಪೆಸಿಫಿಕ್ ಅಲಿಗೇಶನ್ ಇದ್ದರೆ, ನೋಟಿಸ್ ಕಳುಹಿಸಿಕೊಡಿ. ಮಾನ್ಯ ಸದಸ್ಯರಾದ ಜಯಚಂದ್ರರವರು ಒಂದು ರಾಜಕೀಯ ಪಕ್ಷದ ಬಗ್ಗೆ ಮಾತನಾಡಿದರು. ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ನೀವು ಮಾತನಾಡುವುದಾದರೆ, ಇಲ್ಲಿ ಪ್ರಸ್ತಾಪಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಇದು ಸರಿಯಿಲ್ಲ.

(ಗೊಂದಲ)

ಶ್ರೀ ಜಿ. ಕರುಣಾಕರರೆಡ್ಡಿ :- ಅವರು ಬಾಯಿಗೆ ಬಂದಂತೆ ಮಾತನಾಡಬಹುದು, ನಾವು ಮಾತನಾಡಬಾರದೇ?

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಯಾವುದೇ ವ್ಯಕ್ತಿಯ ಬಗ್ಗೆಯಾಗಲಿ, ಯಾವುದೇ ಪಕ್ಷದ ಬಗ್ಗೆಯಾಗಲಿ, ಮಾತನಾಡುವುದು ಸರಿಯಲ್ಲ. ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ.

---

xxx ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಿ.ಜನಾರ್ದನರೆಡ್ಡಿ :- ಅವರು ಮೆನ್‌ಶನ್ ಮಾಡಿದ್ದರಲ್ಲ, ಅವರ ಪಾಯಿಂಟ್‌ಗೆ ನಾನು ಕ್ಲಾರಿಫಿಕೇಶನ್ ಕೊಡಬೇಕು.

ಅಧ್ಯಕ್ಷರು :- ಕೊಡಿ. ಆದರೆ, ಸ್ಪೆಸಿಫಿಕ್ ಆಗಿ ಕೊಡಿ. ಯಾವುದೇ ರಾಜಕೀಯ ಪಕ್ಷದ ಬಗ್ಗೆಯಾಗಲಿ, ಯಾವುದೇ ಸಂಸ್ಥೆಯ ಬಗ್ಗೆಯಾಗಲಿ, ಯಾವುದೇ ವ್ಯಕ್ತಿಯ ಬಗ್ಗೆಯಾಗಲಿ, ಯಾವುದೇ ವಿಷಯವನ್ನು ಪ್ರಸ್ತಾಪಿಸಬಾರದು. ಏನಾದರೂ ವಿಷಯ ಇದ್ದರೆ, ಮಾತನಾಡಿ. ಯಾವುದೇ ವ್ಯಕ್ತಿ, ಸಂಸ್ಥೆ ಬಗ್ಗೆ ಏನಾದರೂ ಆಪಾದನೆಗಳಿದ್ದರೆ, ಮುಂಚಿತವಾಗಿ ನೋಟಿಸ್ ಕೊಟ್ಟು ನಂತರ ಪ್ರಸ್ತಾಪಿಸಬೇಕು. ಅದನ್ನೆಲ್ಲವನ್ನೂ ಕಡತದಿಂದ ತೆಗೆದು ಹಾಕಿಸುತ್ತೇನೆ.

ಶ್ರೀ ಆರ್. ಅಶೋಕ್ :- ಮೂಲವಾಗಿ ಗಣಿಗಾರಿಕೆಗೆ ಅನುಮತಿ ಕೊಟ್ಟಿದ್ದು ಅವ್ಯವಹಾರಕ್ಕೆ ಕಾರಣವೆಂದು ಅವರು ಹೇಳುತ್ತಿದ್ದಾರೆ. ಮೂಲವಾಗಿ ಗಣಿಗಾರಿಕೆಗೆ ಅನುಮತಿ ಕೊಟ್ಟವರು ಮೊದಲು ಅಪರಾಧಿಗಳಾಗುತ್ತಾರೆ. ಧರ್ಮಸಿಂಗ್‌ರವರ ಕಾಲದಲ್ಲಿ. . .

(ಗೊಂದಲ)

ಅಧ್ಯಕ್ಷರು :- ನೋಡಿ ಅಶೋಕ್‌ರವರೆ. . .

ಶ್ರೀ ಆರ್. ಅಶೋಕ್ :- ಮಾನ್ಯ ಅಧ್ಯಕ್ಷರೆ ಅವರ ಕಾಲದಲ್ಲಿ 3,448 ಎಕರೆಗಳಷ್ಟು ಕೊಟ್ಟಿದ್ದಾರೆ, ಅನಂತರ 784 ಎಕರೆಗಳಷ್ಟು ಕೊಟ್ಟಿದ್ದಾರೆ.

ಅಧ್ಯಕ್ಷರು :- ಯಾವುದೇ ಹೆಸರನ್ನು ಪ್ರಸ್ತಾಪಿಸುವಂತಿಲ್ಲ. ಯಾವುದೇ ವ್ಯಕ್ತಿಯ ಹೆಸರನ್ನಾಗಲಿ, ಮಂತ್ರಿಗಳ ಹೆಸರನ್ನಾಗಲಿ, ಆಡಳಿತ ಮತ್ತು ವಿರೋಧ ಪಕ್ಷದವರು ಪ್ರಸ್ತಾಪಿಸಬಾರದು.

(ಗೊಂದಲ)

ಅಧ್ಯಕ್ಷರು :- ನಾನು ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿಸುವುದೇನೆಂದರೆ ಚರ್ಚೆಯು ಬೇರೆ ಮಾರ್ಗ ಹಿಡಿಯತಕ್ಕದ್ದಲ್ಲ. ಯಾರೂ ವೈಯಕ್ತಿಕ ಆಪಾದನೆ ಮಾಡುವುದಲ್ಲ. ನಿಮಗೆ ನಿಜವಾಗಿಯು ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇದ್ದರೆ, ಇವತ್ತು ಯಾವುದೇ ಒಬ್ಬ ವ್ಯಕ್ತಿ, ಸಂಸ್ಥೆ, ಹಿಂದೆ ಇದ್ದ ಯಾವುದೇ ಒಬ್ಬ ಮುಖ್ಯಮಂತ್ರಿ ಇರಬಹುದು ಮತ್ತೊಬ್ಬರು ಇರಬಹುದು, ಅವರ ಬಗ್ಗೆ ನಿಮ್ಮ ಆಪಾದನೆಗಳೆನಾದರು ಇದ್ದರೆ ನನಗೆ ನೋಟಿಸ್ ಕೊಟ್ಟು specific ಆಗಿ ತಿಳಿಸಿ.

ನಾನು ಅವಕಾಶ ಕೊಡುವುದಾದರೆ ಕೊಡುತ್ತೇನೆ ಇಲ್ಲದಿದ್ದರೆ ಇಲ್ಲ. ಆದರೆ, ನಿಮ್ಮ ಚರ್ಚೆಯಲ್ಲಿ ಅನಾವಶ್ಯಕವಾಗಿ ಯಾರೋ ವ್ಯಕ್ತಿಗಳ ಬಗ್ಗೆ ಮತ್ತೊಬ್ಬರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಇದಕ್ಕೆ ಸದಸ್ಯರುಗಳು ಸಹಕಾರ ಕೊಡಬೇಕು. ಸುಮ್ಮನೆ ವಿನಾಕಾರಣ ಬೇರೆ ಬೇರೆ ಮಾರ್ಗವನ್ನು ಹಿಡಿಯುವಂಥದ್ದಲ್ಲ. ಈ ಸದನಕ್ಕೂ ಗೌರವ ಬರುವುದಿಲ್ಲ. ಈ ರೀತಿ ನೀವುಗಳು ಪರಸ್ಪರ ಕೆಸರೆರಚುವ ಕೆಲಸ ಮಾಡುವುದಾದರೆ ಈ ಸದನ ನಡೆಸುವುದರಿಂದ ಏನು ಪ್ರಯೋಜನವಾಗುತ್ತದೆ? ಪರಸ್ಪರ ಆಪಾದನೆ ಮಾಡುವುದರಿಂದ ಸದನದಲ್ಲಿ ನಾವು ಏನು ಚರ್ಚೆ ಮಾಡಿದಂತೆ ಆಗುತ್ತದೆ? ಇವತ್ತು ಬೆಳಗಾವಿಯಲ್ಲಿ ಅಧಿವೇಶನವನ್ನು ಕರೆದಿದ್ದೇವೆ, ಉತ್ತರ ಕರ್ನಾಟಕದ ಬಗ್ಗೆ ಏನಾದರು ಚರ್ಚೆ ನಡೆಯುತ್ತದೆ ಎನ್ನುವುದು ಈ ಭಾಗದ ಜನರ ಅಪೇಕ್ಷೆ ಇದೆ. ನಾನು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಆದರೆ, ಸರಿಯಾದಂಥ ರೀತಿಯಲ್ಲಿ ಚರ್ಚೆ ನಡೆಯಲಿ.

ಶ್ರೀ ಟಿ.ಬಿ. ಜಯಚಂದ್ರ :- ಗಣಿಗಾರಿಕೆ ಯಾರ ಕಾಲದಲ್ಲೇ ನಡೆಯಲಿ. ಮಾನ್ಯ ಯಡಿಯಾರಪ್ಪನವರ ಕಾಲದಲ್ಲಿ ಯಾವುದೇ ಲೀಸ್ ಕೊಟ್ಟಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಆದರೆ, ಅಕ್ರಮ ಗಣಿಗಾರಿಕೆ ನಿಂತಿದೆಯೇ? ಪರ್ಮಿಟ್ ಕೊಟ್ಟಿಲ್ಲ, ಲೀಸ್ ಅನ್ನು ಕೊಟ್ಟಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಸಹಸ್ರಾರು ಕೋಟಿ ರೂಪಾಯಿಗಳು ಲೂಟಿಯಾಗತಕ್ಕದ್ದು ನಿಂತಿದೆಯೇ?

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು :- ಎಲ್ಲವೂ ಹೊರಕ್ಕೆ ಬರಲಿ. ರಾಜ್ಯಪಾಲರ ಕಾಲದಲ್ಲಿ ಏನು ಮಾಡಿದರು ಇವರ ಕಾಲದಲ್ಲಿ ಏನು ಮಾಡಿದರು. ಆದ್ದರಿಂದ ....

(ಗೊಂದಲ)

ಅಧ್ಯಕ್ಷರು :- ಅವರು ಪೂರ್ಣ ಮಾಡದೆಯೇ ಈ ರೀತಿ ಮಂತ್ರಿಗಳು ಪದೇ ಪದೇ ಎದ್ದು ನಿಂತು ಉತ್ತರ ಕೊಡುವುದು ಸರಿಯಲ್ಲ. ನಿಮಗೂ ಗೌರವ ಬರುವುದಿಲ್ಲ. ಅವರು ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಮುಗಿಸಲಿ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು :- ಅವರು ಪ್ರಸ್ತಾಪ ಮಾಡುವದಕ್ಕೆ..

ಅಧ್ಯಕ್ಷರು :- ಈ ರೀತಿ ಪರಸ್ಪರ ಮಾತನಾಡುವುದು ಸರಿಯಲ್ಲ. ಅವರು ಮಾತನಾಡಿ ಮುಗಿಸಲಿ. ಅನಂತರ ನೀವು ಉತ್ತರವನ್ನು ಕೊಡಿ. ಜಯಚಂದ್ರರವರೆ

ನೀವು ಪ್ರಿಲಿಮಿನರಿ ಸಬ್‌ಮಿಷನ್ ಮುಗಿಸಿಬಿಡಿ. ಅನಂತರ ಸರ್ಕಾರದವರು ಉತ್ತರವನ್ನು ಕೊಡಲಿ.

ಶ್ರೀ ಟಿ.ಬಿ.ಜಯಚಂದ್ರ :- ಅನಧಿಕೃತವಾಗಿ ಗಣಿಗಾರಿಕೆ ಮಾಡುವುದಕ್ಕೆ ಲೀಸ್, ಪರ್ಮಿಟ್ ಬೇಕಾಗಿಲ್ಲ. ನೀವು ಆಡಳಿತ ಯಂತ್ರವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದಾದರೆ..

ಅಧ್ಯಕ್ಷರು :- ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನೀವು ಪ್ರಿಲಿಮಿನರಿ ಸಬ್‌ಮಿಷನ್ ಮುಗಿಸಿ. Merit of the case ಉಳಿದ ವಿಚಾರಗಳನ್ನು ವಿವರವಾಗಿ ಚರ್ಚೆ ಮಾಡುವಿರಂತೆ. ಆದ್ದರಿಂದ ಈಗ ಮೆರಿಟ್ ಅನ್ನು ಪ್ರಸ್ತಾಪ ಮಾಡದೆಯೇ ಕೇವಲ ಪ್ರಿಲಿಮಿನರಿ ಸಬ್‌ಮಿಷನ್ ಮಾತ್ರ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ :- ನಿಲುವಳಿ ಸೂಚನೆಯಲ್ಲಿ ಏಕೆ ಇದು ಚರ್ಚೆಯಾಗಬೇಕೆಂದರೆ, ಇದರ ಬಗ್ಗೆ ಇಡೀ ದೇಶಕ್ಕೆ ವರ್ತಮಾನ ಹೋಗಬೇಕಾಗುತ್ತದೆ. ನಿರ್ದಿಷ್ಟವಾದ ವಿಚಾರದಲ್ಲಿ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕಾಗುತ್ತದೆ. ಆದ್ದರಿಂದ ಇದು ನಿಲುವಳಿ ಸೂಚನೆಯ ಮೂಲಕ ಚರ್ಚೆಯಾಗಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ನನಗೂ ಗೊತ್ತಿದೆ. ಆದರೆ ಬೇರೆ ರಾಜ್ಯದ ಗಮನವನ್ನು ಸೆಳೆಯಬೇಕಾದಂಥ ಸಂದರ್ಭದಲ್ಲಿ, ಕೋಟಿಗಟ್ಟಲೆ ಹಣ ಭೊಕ್ಕಸಕ್ಕೆ ನಷ್ಟವಾಗುತ್ತಿರತಕ್ಕದ್ದು, ಕೋಟ್ಯಾಂತರ ರೂಪಾಯಿ ಆಸ್ತಿ ಖಾಸಗಿಯವರ ಪಾಲಾಗುತ್ತಿರತಕ್ಕದ್ದು. ಯಾವುದೇ ವರದಿ ಮತ್ತು ವಿಚಾರವನ್ನು ತೆಗೆದುಕೊಳ್ಳಲಿ ಅದರಲ್ಲಿ ಅವ್ಯವಹಾರವಾಗಿರುವುದು ಎಷ್ಟೋ ಕೋಟಿ. ಅದನ್ನು ಅಧಿಕಾರಿಗಳಿಂದ ವಸೂಲಿ ಮಾಡಿ. 5, 10, 20 ಕೋಟಿ ಒಬ್ಬರು ಮಾಜಿ ಮುಖ್ಯಮಂತ್ರಿಗಳಿಂದ 30 ಕೋಟಿ ಇವೆಲ್ಲವನ್ನು ಸೇರಿಸಿದರೆ ಸುಮಾರು 100 ಕೋಟಿಯಾಗುತ್ತದೆ. ಒಂದು ಟನ್‌ಗೆ 16 ರಿಂದ 27 ರೂಪಾಯಿ ಇರುವುದು, ಆದರೆ ಮಾರಾಟವಾಗುತ್ತಿರುವುದು 7 ಸಾವಿರಕ್ಕೆ. ಅದರಲ್ಲಿ ಸಾರಿಗೆ ವೆಚ್ಚ ಹೋದರೆ ಒಂದು ಟನ್‌ಗೆ 6 ಸಾವಿರ ರೂಪಾಯಿ ಲಾಭ ಬರುತ್ತಿದೆ. ಆ ಹಣ ಎಲ್ಲಿಗೆ ಹೋಗುತ್ತಿದೆ. ಅದು ಖಾಸಗಿಯವರ ಕೈಗೆ ಹೋಗಿದೆ. ಹೆಲಿಕಾಪ್ಟರ್‌ಗಳು ಬರುತ್ತವೆ. ನಮ್ಮ ಸಂವಿಧಾನದಲ್ಲಿ concentration of wealthಗೆ ಅವಕಾಶ ಇದೆಯೆ? ಅದನ್ನು ಸರ್ಕಾರ ಏಕೆ ನಿಯಂತ್ರಣ ಮಾಡಬಾರದು ಎಂದು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಇಡಿ ದೇಶದಲ್ಲಿ ಇವತ್ತು ಆರ್ಥಿಕ ಕುಸಿತವಾಗಿದೆ. ಟಾಟಾ, ಬಿರ್ಲಾ ಮುಂತಾದ ಕಂಪನಿಗಳವರು ನೂರಾರು ವರ್ಷಗಳಿಂದ ಕೈಗಾರಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಆದರೆ, 4-5 ವರ್ಷದಲ್ಲಿ, ನಾನು ಬಳ್ಳಾರಿ, ತುಮಕೂರು ಮತ್ತು ಚಿತ್ರದುರ್ಗವನ್ನು ಸೇರಿಸಿ ಹೇಳುತ್ತಿದ್ದೇನೆ, 4 ವರ್ಷದಲ್ಲಿ ಇವತ್ತು ಹೆಲಿಕಾಪ್ಟರ್‌ನಲ್ಲಿ ಓಡಾಡುವ ಮಟ್ಟಕ್ಕೆ ಬಂದಿದ್ದಾರಲ್ಲಾ ಈ ರಾಜ್ಯದಲ್ಲಿ ಏನಾಗುತ್ತಿದೆ? ಒಂದು ಕಡೆ ಬಡತನ, ಇನ್ನೊಂದು ಕಡೆ ಸರ್ಕಾರಕ್ಕೆ ನಷ್ಟ. ಆದುದರಿಂದ ರಾಜ್ಯದ ಹಿತದೃಷ್ಟಿಯಿಂದ ಈ ವಿಚಾರ ಚರ್ಚೆಯಾಗಬೇಕಾಗುತ್ತದೆ. ಸಹಸ್ರಾರು ಕೋಟಿ ಮೊತ್ತದ ನಮ್ಮ ಸಂಪತ್ತು ಲೂಟಿಯಾಗುತ್ತಿದೆ. ಇವತ್ತು ಬೇರೆ ರಾಜ್ಯದಿಂದ ಬಂದಿರುವ ಕಂಪನಿಗಳು ಗಣಿಗಾರಿಕೆ ಮಾಡುತ್ತಿರುವಾಗ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಆಡಳಿತ ಯಂತ್ರ ಸರಿಪಡಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಇದನ್ನು ಯಾವುದಾದರು ಒಂದು ರೂಪದಲ್ಲಿ ಸರಿಪಡಿಸಬೇಕು ಎನ್ನುವುದಕ್ಕೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ಸರ್ಕಾರಕ್ಕೆ ನಾವು ಮಾಡತಕ್ಕ ಸಹಾಯ, ರಾಜ್ಯದ ಜನತೆಗೆ ಮಾಡತಕ್ಕ ಸಹಾಯ. ನಮಗೆ ಅವಕಾಶ ಕೊಡಿ, ಎಲ್ಲಿ ಹಣ ಸೋರಿಹೋಗುತ್ತಿದೆ, ಹೇಗೆ ಹೋಗುತ್ತಿದೆ, ಅದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆಯಾಗಲಿ. ಇದನ್ನು ನಾವು ಕೇವಲ ರಾಜಕೀಯ ಕಾರಣಕ್ಕಾಗಿ ಪ್ರಸ್ತಾಪ ಮಾಡುತ್ತಿಲ್ಲ. ನಾವು ಸರ್ಕಾರಕ್ಕೆ ಸಲಹೆಯನ್ನು ಕೊಡುವವರಿದ್ದೇವೆ. ಯಾವ ರೀತಿಯಾಗಿ ನೀವು ಇವತ್ತು ಮೈನಿಂಗ್ ಪಾಲಿಸಿಯನ್ನು ತಂದಿದ್ದೀರಿ. ಅದರಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ತಿಳಿಸಿದ ನಂತರ ಅದನ್ನು ಸರಿಪಡಿಸಲು ಅವಕಾಶ ಇದೆ. ಆ ಕಾರಣಕ್ಕೋಸ್ಕರ ನಮಗೆ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅದನ್ನು ನಿಲುವಳಿ ಸೂಚನೆಯ ಮೂಲಕ ಮಾಡಿದರೆ ಹೆಚ್ಚು ಘನತೆ ಬರುತ್ತದೆ. ಸರ್ಕಾರಕ್ಕೆ ಸಹಾಯವಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಮಾನ್ಯ ಅಧ್ಯಕ್ಷರೆ, ಇದನ್ನು ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ತಂದಿರುವ ಉದ್ದೇಶವೇನೆಂದರೆ, ಮೊದಲನೆಯದಾಗಿ ಇಷ್ಟೊಂದು ಗಂಬೀರವಾದಂಥ ವಿಚಾರದ ಬಗ್ಗೆ ಸದನ ಮತ್ತು ಇಲ್ಲೇನು ರಾಜಕಾರಣಿಗಳು ಇದ್ದೇವೆ ಅವರಿಗೆ ಇಚ್ಚಾಶಕ್ತಿ ಇದೆಯೇ ಎಂಬ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಇದು ಬಹಳ ಮುಖ್ಯ. ಇವತ್ತು ಅಲ್ಲಿ ಕಳ್ಳತನವಾಗುತ್ತಿರುವುದು ನಿಜ. ಅದನ್ನು ಕಾಂಗ್ರೆಸ್ ಪಕ್ಷದವರು, ಜನತಾದಳದವರು ಲೀಸ್ ಕೊಟ್ಟಿದ್ದಾರೋ ಇನ್ನು ಮುಂದೆ ಯಾರು ಲೀಸ್ ಕೊಡುತ್ತಾರೋ ಎಂಬುದು ಮುಖ್ಯವಲ್ಲ. ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವುದು ಸತ್ಯ. ಇದನ್ನು ನಾವೆಲ್ಲರು ಒಪ್ಪಬೇಕಾಗುತ್ತದೆ. ಇದನ್ನು

ಮೆರಿಟ್ಸ್ ಮೇಲೆ ಅಥವಾ ಯಾವುದೋ ಒಂದು ವರದಿಯ ಆಧಾರದ ಮೇಲೆ ಒಪ್ಪತಕ್ಕದಲ್ಲ. ಇದು ಪ್ರತಿನಿತ್ಯ ಮಾಧ್ಯಮದಲ್ಲಿ ಬರುತ್ತಿರುವ ವಿಷಯವಾಗಿದೆ. ಕೇವಲ ಯಾವುದೋ ವರದಿಯನ್ನು ಆಧಾರವಾಗಿರಿಸಿ ಇದನ್ನು ಮಾಡತಕ್ಕದ್ದಲ್ಲ. ಕಣ್ಣಿಗೆ ಎದ್ದು ಕಾಣುವಂಥ ಸತ್ಯ ನಾವು ಅಲ್ಲಿ ಹೋಗಿ ಮುಟ್ಟಿನೋಡಬೇಕಾದ ಅವಶ್ಯಕತೆ ಇಲ್ಲ. ಆದರೆ, ನಮ್ಮ ಅನುಭವ ದಿಂದ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗುತ್ತದೆ. ನಾನು ಮುಖ್ಯ ಮಂತ್ರಿಯವರ ಮೇಲೆ ಆರೋಪ ಮಾಡುತ್ತಿಲ್ಲ. ಅಥವಾ ಹಿಂದಿನ ಮುಖ್ಯಮಂತ್ರಿಯವರ ಮೇಲೆ ಆರೋಪ ಮಾಡುತ್ತಿಲ್ಲ. ಇದರ ಸತ್ಯ ಹೊರಕ್ಕೆ ಬರಬೇಕಾಗಿದೆ. ಈ ಸತ್ಯ ಹೊರಕ್ಕೆ ಬರಬೇಕಾಗಿದ್ದರೆ ಈ ಸದನದಲ್ಲಿ ಅದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಬೇಕಾಗಿದೆ. ಯಾರ್ಯಾರು ತಪ್ಪಿತಸ್ತರಿದ್ದಾರೊ ಅವರ ಮೇಲೆ ಕ್ರಮ ಕೈಗೊಳ್ಳತಕ್ಕಂಥ ದೃಢ ಸಂಕಲ್ಪವನ್ನು ನಮ್ಮಲ್ಲಿ ಮಾಡಿಕೊಳ್ಳಬೇಕಾಗಿದೆ. ಅದು ಯಾರೇ ಇರಲಿ, ಯಾರೇ ತಪ್ಪಿತಸ್ಥರಿರಲಿ Government should see that they are hanged ಅವರನ್ನು ಗಲ್ಲಿಗೆ ಏರಿಸತಕ್ಕ ಮಟ್ಟಕ್ಕೆ ನಾವು ಹೋಗಬೇಕಾಗುತ್ತದೆ ಎಂದು ಒಂದೇ ಮಾತಿನಲ್ಲಿ ಹೇಳಬಯಸುತ್ತೇನೆ. ಅವರೆಲ್ಲಾ ದೇಶದ್ರೋಹಿಗಳು. ಒಂದು ಕಡೆ ಒಪ್ಪೊತ್ತಿನ ಅನ್ನ ಸಿಗಲಾರದೆ ಇರುವ ಜನರಿಗೆ ರಕ್ಷಣೆ ಕೊಡುವ ಮಾತನ್ನು ನಾವು ಆಡುತ್ತೇವೆ. ಮತ್ತೊಂದು ಕಡೆ ಪ್ರತಿನಿತ್ಯ ಇಂಥ ಹಗಲುದರೋಡೆ ಮಾಡುವವರಿಗೆ ಸರ್ಕಾರ ರಕ್ಷಣೆ ಕೊಡಲು ಮುಂದಾಗಲು ಸಾಧ್ಯವೇ? ಈ ಆಲೋಚನೆ ನಮ್ಮಲ್ಲಿ ಇವತ್ತು ಬರಬೇಕಾಗಿದೆ. ನಾವು ನಿಲುವಳಿ ಸೂಚನೆ ತಂದಿದ್ದು ಈ ಕಾರಣಕ್ಕೋಸ್ಕರ. By merits ಅನ್ನು ನಾವು touch ಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಮುಂದೆ ನಾವು ಪ್ರಸ್ತಾಪ ಮಾಡುತ್ತೇವೆ. ಯಾರ reports ಆಧಾರವಾಗುತ್ತದೆ ಯಾರ findings ಆಧಾರದ ಮೇಲೆ ಆಗುತ್ತದೆ ಯಾರು encroach ಮಾಡಿದ್ದಾರೆ, ಎಷ್ಟು ಕಳ್ಳತನವಾಗುತ್ತದೆ, revenue loss ಎಷ್ಟಾಗುತ್ತಿದೆ, ಇದರ ಬಗ್ಗೆ ಚಿಂತನೆಯನ್ನು ಅನಂತರ ಮಾಡುತ್ತೇವೆ. ಅದಕ್ಕೆ ತಾವು ಅಪ್ಪಣೆಯನ್ನು ಕೊಡಬೇಕು.

ಅಧ್ಯಕ್ಷರು :- Ok.

ಶ್ರೀ ಟಿ.ಬಿ. ಜಯಚಂದ್ರ :-ಇಲ್ಲಿ ಆಡಳಿತ ಯಂತ್ರ ಕುಸಿದಿದೆ ಅಥವಾ ಕೆಲವರ ವಶವಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ.

ಅಧ್ಯಕ್ಷರು :- ಅದು ಈಗ ಬೇಡ. ಇದರ ಬಗ್ಗೆ ಚರ್ಚೆಗೆ ಬಂದಾಗ ಪ್ರಸ್ತಾಪ ಮಾಡುವಿರಂತೆ. ನೀವು detail ಹೋಗಬೇಡಿ.

ಶ್ರೀ ಟಿ.ಬಿ. ಜಯಚಂದ್ರ :- ಬಳ್ಳಾರಿಯು ಒಬ್ಬ ಡಿ.ಎಫ್.ಒ.ಗೆ ಮಂತ್ರಿಗಳಿಂದ ದೂರವಾಣಿಯ ಕರೆ ಬರುತ್ತದೆ.

ಅಧ್ಯಕ್ಷರು :- Detail ಚರ್ಚೆ ಈಗ ಬೇಡ. ಮೆರೀಟ್ ಆಫ್ ದಿ ಕೇಸ್ ಹೋಗುವುದು ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ತಾವು ನಮಗೂ ಅವಕಾಶ ಕೊಡಿ.

ಅಧ್ಯಕ್ಷರು :- You are not a signatory. ನೀವು ನಿಲುವಳಿ ಸೂಚನೆಗೆ ಸಹಿ ಮಾಡಿಲ್ಲ.

[ಗೊಂದಲ]

ಅಧ್ಯಕ್ಷರು :- ಅವರು ಈಗಾಗಲೇ ಮಾತನಾಡಿ ಮುಗಿಸಿದ್ದಾರೆ.

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಅಧ್ಯಕ್ಷರೆ, ನೀವು full-fledged discussionಗೆ ಅವಕಾಶ ಕೊಟ್ಟಿದ್ದಲ್ಲಿ, ದಯವಿಟ್ಟು ನಮಗೂ ಮಾತನಾಡಲು ಅವಕಾಶ ಕೊಡಿ.

[ಗೊಂದಲ]

ಮಾನ್ಯ ನಾಡಗೌಡರು ಹೇಳಿದ್ದು 'ಉಲ್ಟಾ ಚೋರ್, ಕೊತ್ವಾಲ್ ಕೋ ಡಾಂಟ್' ಎನ್ನುವ ರೀತಿಯಲ್ಲಿ ಇದೆ. ಎಲ್ಲವನ್ನೂ ಅವರೇ ಮಾಡಿ, ಈಗ ನಮ್ಮ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಅವರ ಕಾಲದಲ್ಲಿ ಅಕ್ರಮವಾಗಿದೆ. 2001ರಿಂದ 2006ರವರೆಗೆ ನೀವು ಇದ್ದಿರಿ. ನಿಮ್ಮ ಸರ್ಕಾರ ಇದ್ದರೂ ಕೂಡ ಓಬಳಾಪುರದಲ್ಲಿನ ಅಕ್ರಮವನ್ನು ತಡೆಯಲಿಕ್ಕೆ ನಿಮಗೆ ಏಕೆ ಆಗಲಿಲ್ಲ? .....

ಅಧ್ಯಕ್ಷರು :- ..... ಅವರು ಯಾರ ಹೆಸರನ್ನೂ ಸಹ ಹೇಳಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ :- ....ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ. ಅದರ ಬೌಂಡರಿಯನ್ನು fix ಮಾಡಲು ನೀವೇಕೆ ಒತ್ತಾಯ ಮಾಡುವುದಿಲ್ಲ?

ಇವತ್ತಿಗೂ ನೀವು ಆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿಲ್ಲ. ಕೇಂದ್ರ ಸರ್ಕಾರವೇ royaltyಯನ್ನು fix ಮಾಡುತ್ತದೆ. ...

ಶ್ರೀ ಟಿ.ಬಿ. ಜಯಚಂದ್ರ :- ನಾವು royalty ವಿಚಾರದ ಚರ್ಚೆಗೆ ಇಲ್ಲಿ ಹೋಗುತ್ತಿಲ್ಲ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡೋಣ. ಯಾರ್ಯಾರ ಕಾಲದಲ್ಲಿ ಏನೇನಾಗಿದೆ ಎಂಬುದನ್ನು ನೋಡೋಣ .....

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಕೇಂದ್ರ ಸರ್ಕಾರವೇ royalty fix ಮಾಡುತ್ತದೆ. ಕೇಂದ್ರ ಸರ್ಕಾರವೇ export tax fix ಮಾಡುತ್ತದೆ. ಅದನ್ನು ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಿದೆ. ರಾಜ್ಯ ಸರ್ಕಾರದ ಕೈಯಲ್ಲಿ royalty fix ಮಾಡುವ ಅಥವಾ export tax fix ಮಾಡುವ ಅಧಿಕಾರವಿಲ್ಲ...

ಶ್ರೀ ಟಿ.ಬಿ. ಜಯಚಂದ್ರ :- ಆದರೆ permit ಕೊಡುವವರು ಯಾರು? ಅದು ರಾಜ್ಯ ಸರ್ಕಾರವೇ.

[ಗೊಂದಲ]

ನೀವು permit ಕೊಡುವುದನ್ನು ನಿಲ್ಲಿಸಿದ ಮೇಲೆ, ಎಷ್ಟು ಟನ್ ಅದಿರನ್ನು ಅವರು ಆಚೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬುದನ್ನು ನೋಡಬೇಕಿತ್ತಲ್ಲವೇ?...

[ಗೊಂದಲ]

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ರೀತಿಯಾಗಿ ನೀವು ಪರಸ್ಪರ ಚರ್ಚೆ ಮಾಡುವುದು ಪರಸ್ಪರ ಉತ್ತರ ಕೊಡುವುದು ಸರಿಯಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಮಾನ್ಯ ಬಾಲಕೃಷ್ಣರವರೆ, ನೀವು ನಿಲುವಳಿ ಸೂಚನೆಗೆ ಸಹಿ ಮಾಡಿಲ್ಲ. ನೀವು ಸಹಿ ಮಾಡಿ ಕಳುಹಿಸಿದ ಯಾವುದೇ ನಿಲುವಳಿ ಸೂಚನೆ ನನಗೆ ಬಂದಿಲ್ಲ.

[ಗೊಂದಲ]

ಮಾನ್ಯ ಬಾಲಕೃಷ್ಣರವರೆ, ತಾವೂ ಸಹ ಮಾತನಾಡಬೇಕೆಂದಿದ್ದರೆ, ಮಾತನಾಡಿ.

[ಗೊಂದಲ]

ಶ್ರೀ ಕಟ್ಪಾ ಸುಬ್ರಹ್ಮಣ್ಯ ನಾಯ್ಡು :- ನೀವು ಅವರಿಗೆ ಮಾತನಾಡಲು ಅವಕಾಶ ಕೊಡಬಾರದು.

[ಗೊಂದಲ]

ಅಧ್ಯಕ್ಷರು :- ಅವರು ಮಾತನಾಡಲಿ. ಮಾನ್ಯ ಮಂತ್ರಿಗಳಾದ ನೀವೂ ಸಹ ಮಾತನಾಡಿ.

[ಗೊಂದಲ]

ಈಗ ಮಾನ್ಯ ಜಯಚಂದ್ರರವರು Preliminary submission ಮಾಡಿದ್ದಾರೆ. ಚರ್ಚೆಗೆ ಅವಕಾಶ ಕೊಟ್ಟಾಗ ನೀವೂ ಮಾತನಾಡುವಿರಂತೆ.

[ಗೊಂದಲ]

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ಏಕೆಂದರೆ, ಅವರು ನಮ್ಮ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

[ಗೊಂದಲ]

ಅಧ್ಯಕ್ಷರು :- ನೀವು signatory ಅಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ನಮ್ಮ ವಿಚಾರ ಪ್ರಸ್ತಾಪವಾಗಿರುವುದರಿಂದ ಮಾತನಾಡಬೇಕಾಗಿದೆ. ದಯವಿಟ್ಟು ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

[ಗೊಂದಲ]

ಮಾನ್ಯ ಜಯಚಂದ್ರರವರು ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಅಕ್ರಮ ಗಣಿಗಾರಿಕೆಗೂ ಮತ್ತು ಬಿ.ಜೆ.ಪಿ.ಗೂ ಸಾಕಷ್ಟು ನಂಟು ಇದೆ

ಎಂಬ ವಿಚಾರವನ್ನು ಅವರು ಈ ಸದನದಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕೆ ಉತ್ತರವಾಗಿ ಮಾನ್ಯ ಜನಾರ್ದನ ರೆಡ್ಡಿಯವರು .....

ಅಧ್ಯಕ್ಷರು :- ಅದನ್ನು ಈಗಾಗಲೇ ಕಡತದಿಂದ ತೆಗೆದು ಹಾಕಲಾಗಿದೆ.

[ಗೊಂದಲ]

ಶ್ರೀ ಹೆಚ್.ಸಿ. ಬಾಲಕೃಷ್ಣ :- .... ತಾವು ಸತ್ಯ ಹರಿಶ್ಚಂದ್ರರು ಎನ್ನುವ ಮಾತನ್ನು ಹೇಳಿದ್ದಾರೆ. ಅವರು 150 ಕೋಟಿ ರೂ.ಗಳ ಹಗರಣವನ್ನು ಬಯಲು ಮಾಡುತ್ತೇನೆಂದು.....

ಅಧ್ಯಕ್ಷರು :- ಇದನ್ನೆಲ್ಲಾ ಪ್ರಸ್ತಾಪ ಮಾಡುವುದು ಬೇಡ. Preliminary submission ಇದ್ದರೆ ಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದು ನಿಮಿಷ. ಇವರು ಮಾಧ್ಯಮದವರನ್ನೆಲ್ಲಾ ಬಳ್ಳಾರಿಗೆ ಕರೆದುಕೊಂಡು ಹೋಗಿ, ಅಲ್ಲಿ ಯಾವ ರೀತಿಯಾಗಿ ಪಟಾಕಿಯನ್ನು ಠುಸ್ ಮಾಡಿದ್ದಾರೆ ಎಂಬುದು ಎಲ್ಲರಿಗೂ ಕೂಡ ಗೊತ್ತಿದೆ. ದಯವಿಟ್ಟು ಮಾನ್ಯ ಜಯಚಂದ್ರರವರು ತಂದಿರುವ ನಿಲುವಳಿ ಸೂಚನೆ ಮಂಡಿಸಲು ಅವಕಾಶ ಮಾಡಿಕೊಡಬೇಕೆಂದು ತಮಗೆ ನಾನು ಒತ್ತಾಯ ಮಾಡುತ್ತೇನೆ. ಇಲ್ಲವೇ ಈ ವಿಚಾರದ ಬಗ್ಗೆ ನೇರವಾಗಿ ಸಿ.ಬಿ.ಐ. ತನಿಖೆಗೆ ವಹಿಸಲು ಮಾನ್ಯ ಮುಖ್ಯಮಂತ್ರಿಯವರು ಆದೇಶ ಮಾಡುವುದಾದರೆ, ಅದನ್ನು ನಾವು ಸ್ವಾಗತಿಸುತ್ತೇವೆ. ಈ ಎರಡರಲ್ಲಿ ಯಾವುದಾದರೊಂದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

[ಗೊಂದಲ]

ಅಧ್ಯಕ್ಷರು :- ಮಾನ್ಯ ನರೇಂದ್ರಬಾಬುರವರೆ, ಈಗ ನಾವು detail ಚರ್ಚೆಗೆ ಹೋಗುವುದು ಬೇಡ. ಅದಕ್ಕೆ ನಾನು ಇನ್ನೂ ಅವಕಾಶ ಕೊಟ್ಟಿಲ್ಲ. ಮುಂದೆ ಅದಕ್ಕೆ ಅವಕಾಶ ಕೊಟ್ಟಾಗ ಮಾತನಾಡುವಿರಂತೆ.

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ

ಮಾತನಾಡುತ್ತಾರೆಂದು ಇಡೀ ಜನ ನೋಡುತ್ತಿದ್ದಾರೆ ಎಂದು ತಾವು ಚಿನ್ನದಂಥ ಮಾತನ್ನು ಹೇಳಿದಿರಿ. ಖಂಡಿತವಾಗಿಯೂ ನಾವು ಅದರ ಪರವಾಗಿದ್ದೇವೆ. ರಾಜ್ಯದ ಸಂಪನ್ಮೂಲವನ್ನು ಕ್ರೋಢಿಕರಿಸುವ ದಿಕ್ಕಿನಲ್ಲಿ ನಾವು ನಿಮ್ಮ ಜೊತೆಗಿದ್ದೇವೆ. ಪೋಲಾಗುತ್ತಿರುವ ಸಂಪನ್ಮೂಲದ ಬಗ್ಗೆ ಇಡೀ ರಾಜ್ಯದ ಜನ ಗಮನಿಸುತ್ತಿದ್ದಾರೆ. ಈ ಸಂಪನ್ಮೂಲ ಪೋಲಾಗುತ್ತಿರುವುದನ್ನು ತಡೆಗಟ್ಟಬೇಕಾದರೆ, ಅದರ ಬಗ್ಗೆ ಚರ್ಚಿಸಲು ನೀವು ಅವಕಾಶ ಮಾಡಿಕೊಡಬೇಕು. ನಿಮಗೆ ಎಲ್ಲರಿಗಿಂತ ಹೆಚ್ಚಿನ ಅನುಭವವಿದೆ. ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಲಿಕ್ಕೆ ಅವಕಾಶ ಕೊಡಬಾರದು, ಗಣಿ ಒತ್ತುವರಿ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಕಳಕಳಿಯಿಂದ ಮನವಿ ಮಾಡಿಕೊಂಡು, ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] :- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಟಿ.ಬಿ.ಜಯಚಂದ್ರರವರು ಮತ್ತು ಇತರ 15 ಜನ ಸದಸ್ಯರು ಬಹಳ ಗಂಭೀರವಾದ ವಿಚಾರವೊಂದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಇದು ರಾಜ್ಯದ ಸಂಪತ್ತಿನ ವಿಚಾರವಾಗಿದೆ. ಅದನ್ನು ಹೇಗೆ ಕಾಪಾಡಿಕೊಳ್ಳಬೇಕು? ಲೂಟಿ ಆಗುತ್ತಿರುವುದನ್ನು ಹೇಗೆ ತಡೆಗಟ್ಟಬೇಕು? ಎಂಬ ಬಗ್ಗೆ ಬಹಳ ಗಂಭೀರವಾಗಿ ಇಲ್ಲಿ ಪ್ರಸ್ತಾಪಿಸಿದ್ದಾರೆ. ಈ ಸದನದಲ್ಲಿ ಇದು ಚರ್ಚೆಯಾಗಬೇಕು. ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಿ, ಸದನ ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈ ಚರ್ಚೆಯ ಸಂದರ್ಭದಲ್ಲಿ ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು permit ಕೊಟ್ಟರು? ಎಷ್ಟೆಷ್ಟು ಹೆಕ್ಟೇರ್ ಪ್ರದೇಶಕ್ಕೆ ಕೊಟ್ಟರು? ಯಾವ್ಯಾವ ಅರಣ್ಯ ಪ್ರದೇಶದಲ್ಲಿ ಕೊಟ್ಟರು? ಎಂಬುದೂ ಕೂಡ ಸಂಪೂರ್ಣವಾಗಿ ಚರ್ಚೆಯಾಗಬೇಕು. ಚರ್ಚೆಯ ನಂತರ...

[ಗೊಂದಲ]

ಅಧ್ಯಕ್ಷರು :- ಮಾನ್ಯ ತನ್ವೀರ್ ಸೇಠ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್‌ಕುಮಾರ್ :- ಈ ವಿಚಾರದ ಬಗ್ಗೆ ಸದನದ ಒಳಗೆ ಮತ್ತು ಹೊರಗೆ ಸಾಕಷ್ಟು ಚರ್ಚೆಗಳಾಗಿದೆ. ಆರೋಪ ಮತ್ತು ಪ್ರತ್ಯಾರೋಪಗಳೆಲ್ಲಾ ಬಂದಿವೆ. ಈಗಾಗಲೇ ಸ್ಪಷ್ಟಪಡಿಸಿರುವಂತೆ ಮತ್ತು ಅದನ್ನು ಮಾನ್ಯ ಜಯಚಂದ್ರರವರು ಅನುಮೋದಿಸಿರುವಂತೆ, ಈ ಸರ್ಕಾರ ಅಸ್ತಿತ್ವಕ್ಕೆ ಬಂದ

ಮೇಲೆ, ಒಂದೇ ಒಂದು permit ಅನ್ನೂ ಕೂಡ ನಾವು ಕೊಟ್ಟಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಈಗ ನಾವು ಗಣಿಗಾರಿಕೆ ನೀತಿಯನ್ನೂ ಕೂಡ ಪ್ರಕಟ ಮಾಡಿದ್ದೇವೆ. ಲೋಕಾಯುಕ್ತರ ವರದಿಯ ಮೇಲೆ ತಾವು ಚರ್ಚೆಯನ್ನು ಮಾಡುತ್ತಿದ್ದೀರಿ. ನಿಲುವಳಿ ಸೂಚನೆಯನ್ನು ಯಾವ ರೀತಿ ತರಬೇಕು? ಯಾವ್ಯಾವ ವಿಷಯಗಳನ್ನು ಅದರ ಅಡಿಯಲ್ಲಿ ಚರ್ಚೆ ಮಾಡಬಾರದು ಎಂಬ ಬಗ್ಗೆ ನಿಯಮಗಳಲ್ಲಿದೆ. Rule 63 ಏನು ಹೇಳುತ್ತದೆ ಎಂದರೆ,

> "63. ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯ ಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನ ಬದ್ಧ ನ್ಯಾಯಾಧಿಕರಣ ಅಥವಾ ಶಾಸನ ಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕುದ್ದಲ್ಲ"

ಲೋಕಾಯುಕ್ತದ report ಆಧಾರವಾಗಿ ಇಟ್ಟುಕೊಂಡು ಇಲ್ಲಿ ನೀವು ಪ್ರಸ್ತಾಪಿಸುತ್ತಿದ್ದೀರಿ. ಲೋಕಾಯುಕ್ತರು ಜನವರಿ 2000ದಿಂದ ಜುಲೈ 2006 ರವರೆಗಿನ ಅವಧಿಯಲ್ಲಿ ಏನೇನು ಗಣಿಗಾರಿಕೆ ಆಗಿದೆ ಎಂಬುದಕ್ಕೆ ಸಂಬಂಧಪಟ್ಟಂತೆ ವರದಿಯೊಂದನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ, ನಮ್ಮ ಆಡಳಿತ ಅವಧಿಯನ್ನೂ ಕೂಡ ಸೇರಿಸಿ, ಡಿಸೆಂಬರ್ 2008ರವರೆಗೆ ನೀಡಿದ ಗಣಿ ಪರವಾನಿಗೆ ಮತ್ತು ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಮಾನ್ಯ ಲೋಕಾಯುಕ್ತರನ್ನು ಕೋರಿಕೊಂಡಿದ್ದೇವೆ. We are awaiting that report. Interim report ಬಂದಿದೆ, final report ನಿರೀಕ್ಷಿಸಿದ್ದೇವೆ. ಹೀಗಿರುವಾಗ, ಒಂದು ರಿಪೋರ್ಟ್ ಇನ್ನೂ ಬರಬೇಕಾಗಿರುವಾಗ, ಲೋಕಾಯುಕ್ತರ ಮುಂದೆ ಇರುವ ವಿಷಯದ ಬಗ್ಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸಲಿಕ್ಕೆ ಬರುವುದಿಲ್ಲ. ಹಾಗೆಂದ ಮಾತ್ರಕ್ಕೆ, ಇದರ ಬಗ್ಗೆ ಚರ್ಚೆಯೇ ಆಗಬಾರದೆಂದು ನಾವು ಹೇಳುತ್ತಿಲ್ಲ. ಇದರ ಬಗ್ಗೆ ಚರ್ಚೆಯಾಗಬೇಕು, ಎಲ್ಲಾ ಅಂಶಗಳೂ ಕೂಡ ಆಚೆಗೆ ಬರಬೇಕು. ಯಾರ್ಯಾರು ಯಾವ್ಯಾವ ರೀತಿಯ ಪಾತ್ರಧಾರಿಗಳಾಗಿದ್ದರು? ವಿದೂಷಕರು ಯಾರಾಗಿದ್ದರು? ಹೀರೋ ಯಾರಾಗಿದ್ದರು? ವಿಲನ್ ಯಾರಾಗಿದ್ದರು?

ಎಲ್ಲವೂ ಕೂಡ ಆಚೆಗೆ ಬರಲಿ. ಇದರ ಬಗ್ಗೆ ಚರ್ಚೆಗೆ ಅನುಮತಿ ಕೊಡಲು ನಮ್ಮದೇನೂ ಅಭ್ಯಂತರವಿಲ್ಲ. ಚರ್ಚೆಗೆ ನಾವು ಹೆದರಿ ಹೋಗುತ್ತಿಲ್ಲ. ಆದರೆ, ನಿಲುವಳಿ ಸೂಚನೆ ಮೂಲಕ ಇದನ್ನು ಪ್ರಸ್ತಾಪಿಸುವಂತಿಲ್ಲ, ನಾವು ರೂಲ್ಸ್ ವಿರುದ್ಧ ಹೋಗುವುದಕ್ಕಾಗುವುದಿಲ್ಲ. ಇದನ್ನು ಮಾನ್ಯ ಜಯಚಂದ್ರರವರ ಗಮನಕ್ಕೂ ಕೂಡ ತರುತ್ತಿದ್ದೇನೆ. ಬೇರೆ ಯಾವುದಾದರೂ ಸ್ವರೂಪದಲ್ಲಿ ಇದರ ಬಗ್ಗೆ ಬೇಕಾದರೆ ಚರ್ಚೆಗೆಅವಕಾಶ ಕೊಡಬಹುದು ಎಂದು ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಅವರು ಯಾವೊಂದು ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಲೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕಾಯುಕ್ತರವರು ನಿರ್ದಿಷ್ಟ ಅವಧಿಯೊಂದಕ್ಕೆ ಸಂಬಂಧಿಸಿದಂತೆ ವರದಿಯೊಂದನ್ನು ಕೊಟ್ಟಿದ್ದಾರೆ. 2000-2006ವರೆಗಿನ ಅವಧಿಗೆ ಸಂಬಂಧಿಸಿದಂತೆ ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಬಗ್ಗೆ ನಾವು ಚರ್ಚೆ ಮಾಡೋಣ. 2008ರವರೆಗಿನ ಅವಧಿಯದ್ದೂ ಕೂಡ ವಿಚಾರಣೆ ನಡೆಸಬೇಕೆಂದು ತಾವು refer ಮಾಡಿದ್ದೀರಿ. ಅದರ ಬಗ್ಗೆ ನಾವು ಚರ್ಚೆ ಮಾಡುವುದು ಬೇಡ. ಈಗಾಗಲೇ 2006ರವರೆಗೆ ಕೊಟ್ಟಿದ್ದನ್ನು ನಾವು ಚರ್ಚೆ ಮಾಡೋಣ. ಆ ವರದಿ ನಿಮ್ಮ ಕೈ ಸೇರಿದೆ ಮತ್ತು ನಮ್ಮ ಕೈಯಲ್ಲೂ ಕೂಡ ಇದೆ. ಆ ವರದಿಯಲ್ಲಿ ವ್ಯವಸ್ಥೆಯ ಲೋಪದೋಷಗಳನ್ನು ತಿಳಿಸಿ, ಯಾವ ರೀತಿಯಾಗಿ ರಾಜ್ಯದ ಬೊಕ್ಕಸವನ್ನು ಲೂಟಿ ಆಗುತ್ತಿರುವುದನ್ನು ತಡೆಯಬಹುದಾಗಿದೆ ಎಂಬ ಬಗ್ಗೆ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಇವತ್ತು ಅವುಗಳನ್ನು ನೀವು ನಿಮ್ಮ ಪಾಲಿಸಿಯಲ್ಲಿ ಅಳವಡಿಸಿಕೊಳ್ಳ ಬೇಕಾಗುತ್ತದೆ. ಹಣಕಾಸಿನ ದೃಷ್ಟಿಯಿಂದ ಚರ್ಚೆಯಾದರೆ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಲಿಕ್ಕೆ ಸಾಧ್ಯವಿದೆ.

ನಾನೊಬ್ಬನೆ ಅಲ್ಲ ಬಹಳಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ, ಇದರಿಂದ ಸರ್ಕಾರಕ್ಕೆ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಇವತ್ತು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಬಹುಶ: ಇವತ್ತು ವಿಶೇಷವಾದ ಸಂದರ್ಭ, ಅಧ್ಯಕ್ಷರೆ, ತಮಗೆ ಬಿಟ್ಟಿದ್ದು, ಇವತ್ತು ಲೋಕಾಯುಕ್ತರ 2ನೇ ವರದಿ ಬರಬೇಕಾಗಿದೆ. ಅದು ಬರುವುದಕ್ಕೆ ಆರು ತಿಂಗಳಾಗುತ್ತದೆಯೋ, ವರ್ಷವಾಗುತ್ತದೆಯೋ, ಇಂತಹ ಸಂದರ್ಭದಲ್ಲಿ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ಈ ವಿಷಯದಲ್ಲಿ ಹೆಚ್ಚು ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಕೇಂದ್ರ ಮತ್ತು ಬೇರೆ ರಾಜ್ಯ ಸರ್ಕಾರಗಳ ಗಮನವನ್ನು

ಕೂಡ ಸೆಳೆಯಲು ಸಹಾಯವಾಗುತ್ತದೆ. ಏಕೆಂದರೆ, ಗಣಿ ವಿಚಾರದಲ್ಲಿ ಆಂಧ್ರಪ್ರದೇಶ ಸಹಕಾರ ಮಾಡುತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಆಂಧ್ರಪ್ರದೇಶ ಗಣಿಗೆ ಸಹಾಯ ಮಾಡುತ್ತಿರುವ ಸಂದರ್ಭದಲ್ಲಿ ಇವತ್ತು ನಾವು ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಿದಾಗ, ಇನ್ನೊಂದು ಮುಖ್ಯವಾದ ವಿಚಾರವನ್ನು ಹೇಳುತ್ತೇನೆ, ಬ್ಯುರೋ ಆಫ್ ಮೈನ್ಸ್ ಅವರು ಕೂಡ ಈ ಎಲ್ಲಾ ಮಾಹಿತಿಗಳು ಬಂದ ಮೇಲೆ ಈಗಾಗಲೇ ಅಂದಾಜು ಮಾಡಿದ್ದಾರೆ. ಅವರು ಅಂದಾಜು ಮಾಡಿರುವ ಪ್ರಕಾರ ಸುಮಾರು 2 ಲಕ್ಷ ಕೋಟಿಗೂ ಹೆಚ್ಚು ಅದಿರು ಹೊರಗೆ ಹೋಗಿದೆ. ಇವತ್ತು ನಾವು ಇದಕ್ಕೋಸ್ಕರ ಖೇದ ಮಾಡಬೇಕಾಗಿಲ್ಲ. ನಿಮಗೆ ಲಕ್ಕ ಸಿಕ್ಕೇ ಸಿಗುತ್ತದೆ. ಇವತ್ತು ಯಾರೇ ಎಕ್ಸ್‌ಪೋರ್ಟ್ ಮಾಡಲಿ, ಎಷ್ಟು ಪರ್ಮಿಟ್ ಇಶ್ಯು ಆಗಿದೆ, ಎಷ್ಟನ್ನು ಎಕ್ಸ್‌ಪೋರ್ಟ್ ಮಾಡಿದ್ದಾರೆ ಎಂಬ ಮಾಹಿತಿಯನ್ನು ನೀವು ಪೋರ್ಟ್ಸ್ ಅಥಾರಿಟಿಯಿಂದ ತೆಗೆದುಕೊಳ್ಳಿ. ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ಬಂದಿದೆ, ಎಷ್ಟು ಕಣ್ಮರೆಯಾಗಿದೆ ಎಂಬುದು ಗೊತ್ತಾಗುತ್ತದೆ. ಪೋರ್ಟ್ ಅಥಾರಿಟಿ ಕೇಂದ್ರ ಸರ್ಕಾರದ ಕೈಯಲ್ಲಿದೆ, ಸ್ವಾಮಿ ದಯಮಾಡಿ ಇದನ್ನು ಸಿಬಿಐಗೆ ಕೊಟ್ಟುಬಿಡಿ, ನಾವು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಿ ನಂತರ ಸಿಬಿಐಗೆ ಕೊಡುವುದರಿಂದ ಇದಕ್ಕೆ ಹೆಚ್ಚು ಮಹತ್ವ ಬರುತ್ತದೆ. ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ ಹೆಚ್ಚು ಸಹಾಯವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ಗೌರವಾನ್ವಿತ ಸದಸ್ಯರು ನಿಯಮ 60 ಅಡಿಯಲ್ಲಿ ಈ ನಿಲುವಳಿ ಸೂಚನೆಯ ಮೇಲೆ ಪ್ರಾರಂಭಿಕ ಪ್ರಸ್ತಾಪವನ್ನು ತಾವೆಲ್ಲಾ ಮಾಡಿದ್ದೀರಿ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶವನ್ನು ನಾನು ನಿರಾಕರಿಸುತ್ತೇನೆ. ಆದರೆ ಸಾರ್ವಜನಿಕ ಮಹತ್ವದ ವಿಷಯವಿರುವುದರಿಂದ ಸರ್ಕಾರದ ಪರವಾಗಿಯು ಸಹಿತ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆನ್ನುವ ಮಾತನ್ನು ಅವರು ಹೇಳಿರುವುದರಿಂದ ಈ ಒಂದು ನಿಲುವಳಿ ಸೂಚನೆಯನ್ನು ನಾನು ಪರಿವರ್ತನೆ ಮಾಡಿ ರೂಲ್ 69ರ ಅಡಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಈ ವಿಷಯವನ್ನು ನಾಳೆ ಅಂದರೆ 20ನೇ ತಾರೀಖಿನ ಬೆಳಿಗ್ಗೆ ಅಜೆಂಡಾದಲ್ಲಿ ಮಂಡನೆ ಮಾಡುತ್ತೇನೆ.

ಇನ್ನು ಇಬ್ಬರು ಗೌರವಾನ್ವಿತ ಸದಸ್ಯರು ಪ್ರಮಾಣವಚನ ಸ್ವೀಕಾರ ಮಾಡಬೇಕಾಗಿತ್ತು, ಅವರು ಈಗ ಪ್ರಮಾಣ ವಚನ ಸ್ವೀಕರಿಸುತ್ತಾರೆ.